ಬೆವಿಕಂ

BESCOM

# ಬೆಸ್ಕಾಂ ಸ್ನೇಹಿ

ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತ ಗೃಹಪತ್ರಿಕೆ

ಸಂಪುಟ-7, ಸಂಚಿಕೆ-3 ತ್ರೈಮಾಸಿಕ, ಜುಲೈ - ಸೆಪ್ಟೆಂಬರ್ 2020 ಪುಟಗಳು-12



# ಬೆಸ್ಕಾಂ ವತಿಯಿಂದ

# ಇವಿ ಚಾರ್ಜಿಂಗ್ ಸ್ಟೇಷನ್‌ಗಳ ಸ್ಥಾಪನೆ

ಕರ್ನಾಟಕ ಸರ್ಕಾರವು ಇ-ಸಂಚಾರವನ್ನು ಉತ್ತೇಜಿಸುವ ಸಲುವಾಗಿ ಪ್ರಕಟಿಸಿರುವ ವಿದ್ಯುತ್ ವಾಹನಗಳು ಮತ್ತು ಶಕ್ತಿ ಶೇಖರಣಾ ನೀತಿ 2017 ಗೆ ಪೂರಕವಾಗಿ ಬೆಸ್ಕಾಂ ಸಂಸ್ಥೆಯು ಬೆಂಗಳೂರು ನಗರದ ವಿವಿಧ ಪ್ರದೇಶಗಳಲ್ಲಿ 12 ಡಿ.ಸಿ ಫಾಸ್ಟ್ ಚಾರ್ಜಿಂಗ್ ಕೇಂದ್ರಗಳನ್ನು ಹಾಗೂ 100 ಎ.ಸಿ ಚಾರ್ಜಿಂಗ್ ಪಾಯಿಂಟ್‌ಗಳನ್ನು ಸ್ಥಾಪಿಸಿದ್ದು, ಅವುಗಳನ್ನು ಸಾರ್ವಜನಿಕರ ಬಳಕೆಗಾಗಿ ತೆರೆಯಲಾಗಿದೆ.

**ರಾಜ್ಯ ಸರ್ಕಾರದ ಸಾರಿಗೆ ಇಲಾಖೆಯ ನೆರವಿನಿಂದ ಬೆಸ್ಕಾಂ ಸಂಸ್ಥೆಯು ಈ ಮುಂದೆ ನೀಡಿರುವ ವಿವರಗಳಂತೆ ವಾಹನ ಚಾರ್ಜಿಂಗ್ ಕೇಂದ್ರಗಳನ್ನು ಸ್ಥಾಪಿಸಿದೆ.**

| ಚಾರ್ಜಿಂಗ್ ಮಾದರಿ | 2018 ರಲ್ಲಿ ಸ್ಥಾಪನೆ | ಸಾರಿಗೆ ಇಲಾಖೆಯ ಸಹಯೋಗದೊಡನೆ 2019 ರಲ್ಲಿ ಸ್ಥಾಪನೆ | ಒಟ್ಟು ಚಾರ್ಜಿಂಗ್ ಮಾಡಬಹುದಾದ ವಾಹನಗಳ ಸಂಖ್ಯೆ |
|---|---|---|---|
| ಡಿ.ಸಿ ಫಾಸ್ಟ್ ಚಾರ್ಜರ್ಸ್ | 4 | 26 | 30 |
| ಎ.ಸಿ ಸ್ಲೋ ಚಾರ್ಜರ್ಸ್ | 6 | 100 | 115 |

**ಬೆಸ್ಕಾಂ ಕಛೇರಿಗಳ ಆವರಣಗಳಲ್ಲಿ ಸ್ಥಾಪಿಸಿರುವ ಡಿ.ಸಿ ಫಾಸ್ಟ್ ಚಾರ್ಜರ್ಸ್ ಕೇಂದ್ರಗಳು :** 1) ಬೆವಿಕಂನ ನಿಗಮ ಕಛೇರಿ, ಕೆ.ಆರ್ ವೃತ್ತ, 2) ಬ್ಯಾಟರಾಯನಪುರ W6 ಉಪವಿಭಾಗ, 3) ಕತ್ರಿಗುಪ್ಪೆ O & M ಶಾಖಾ ಕಛೇರಿ (ಇಂದಿರಾ ಕ್ಯಾಂಟೀನ್ ಹತ್ತಿರ) , 4) ಬಿಟಿಎಂ ಲೇಔಟ್ O & M ಶಾಖಾ ಕಛೇರಿ (ಉಡುಪಿ ಗಾರ್ಡನ್ ಸಿಗ್ನಲ್ ಹತ್ತಿರ), 5) ಹೆಚ್.ಎಸ್.ಆರ್ ಲೇಔಟ್ (2ನೇ ಸೆಕ್ಟರ್), 6) ಇಂದಿರಾನಗರ ಇ-6 ಉಪವಿಭಾಗ (ಹೆಚ್.ಎ.ಎಲ್ 2ನೇ ಹಂತ), 7) ಮಹದೇವಪುರ ಇ-12 ಉಪವಿಭಾಗ (Phoenix Market City), 8) ಬಾಣಸವಾಡಿ ಇ-8 ಉಪವಿಭಾಗ (ಬಾಣಸವಾಡಿ ಪೋಲೀಸ್ ಸ್ಟೇಷನ್ ಹತ್ತಿರ), 9) ಯಲಹಂಕ ಸಿ-7 ಉಪವಿಭಾಗ (ಪೋಲೀಸ್ ಸ್ಟೇಷನ್ ವೃತ್ತ), 10.ಮತ್ತಿಕೆರೆ ಸಿ-6 ಉಪವಿಭಾಗ (ಫ್ಲೈಓವರ್ ಕೆಳಗೆ), 11.ಪೀಣ್ಯ ಎನ್-4 ಉಪವಿಭಾಗ , 12.ಮುರುಗೇಶಪಾಳ್ಯ O & M ಶಾಖಾ ಕಛೇರಿ (ಹೆಚ್.ಎ.ಎಲ್ ಮಾರ್ಗ).

**ಎ.ಸಿ ಸ್ಲೋ ಚಾರ್ಜಿಂಗ್ ಸ್ಥಳಗಳು :** 1) ಟಿ.ಟಿಎಂಸಿ ಕಟ್ಟಡಗಳ ಪಾರ್ಕಿಂಗ್ ಸ್ಥಳಗಳಲ್ಲಿ, 2) ಬಿಡಿಎ ಕಾಂಪ್ಲೆಕ್ಸ್‌ಗಳಲ್ಲಿ, 3) ಕೆ.ಎಸ್.ಆರ್.ಟಿ.ಸಿ ಬಸ್ ನಿಲ್ದಾಣ ಮೈಸೂರು ರಸ್ತೆ, 4) ಪೀಣ್ಯಾ ಕೆ.ಎಸ್.ಆರ್.ಟಿ.ಸಿ ಬಸ್ ನಿಲ್ದಾಣ, 5) ಬಿಬಿಎಂಪಿ ವಾರ್ಡ್ ಕಛೇರಿಯ ಆವರಣಗಳಲ್ಲಿ, 6) ಬೆವಿಕಂನ ಕಛೇರಿಯ ಆವರಣಗಳಲ್ಲಿ, 7) RTO ಕಛೇರಿಯ ಆವರಣಗಳಲ್ಲಿ, 8) KIADB, ಜಿಗಣಿ.

**ವಿದ್ಯುತ್ ವಾಹನಗಳ ಚಾರ್ಜಿಂಗ್ ಸೇವೆಯನ್ನು ಪಡೆಯಲು ತಗಲುವ ಶುಲ್ಕ**

| ಕನೆಕ್ಟರ್ ನಮೂನೆ | ದರಗಳು (ಪ್ರತಿ ಯೂನಿಟ್‌ಗೆ) ರೂಪಾಯಿಗಳಲ್ಲಿ |
|---|---|
| ಎ.ಸಿ ಸ್ಲೋ ಚಾರ್ಜಿಂಗ್ (IEC ಕನೆಕ್ಟರ್) | ₹ 7.30 |
| ಡಿ.ಸಿ ಚಾರ್ಜಿಂಗ್ (GB/T ಕನೆಕ್ಟರ್) | ₹ 7.42 |
| ಡಿ.ಸಿ ಫಾಸ್ಟ್ ಚಾರ್ಜಿಂಗ್ (CCS/CHA deMo ಕನೆಕ್ಟರ್) | ₹ 7.99 |

ಗ್ರಾಹಕರು "ElectreeFi" ಮೊಬೈಲ್ ಫೋನ್ ಆ್ಯಪ್ ಡೌನ್‌ಲೋಡ್ ಮಾಡಿಕೊಂಡು ಅದರಲ್ಲಿ ತಮ್ಮ ವಾಹನಗಳ ವಿವರಗಳನ್ನು ನೋಂದಾಯಿಸಿ. ವಾಹನ ಚಾರ್ಜಿಂಗ್ ಸೇವೆಗಳನ್ನು ಪಡೆಯಬಹುದು.




24x7 Helpline **1912** or SMS - **58888**

Download BESCOM Mithra Mobile APP

**www.bescom.karnataka.gov.in**

**ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತ**
(ಕರ್ನಾಟಕ ಸರ್ಕಾರದ ಸಂಪೂರ್ಣ ಸ್ವಾಮ್ಯಕ್ಕೆ ಒಳಪಟ್ಟಿದೆ)
ಕೆ.ಆರ್. ವೃತ್ತ, ಬೆಂಗಳೂರು 560001

# Message from Managing Director



ಆತ್ಮೀಯರೇ,

ಜಗತ್ತನ್ನೇ ಬೆಚ್ಚಿ ಬೀಳಿಸಿರುವ ಕೋವಿಡ್–19 ವೈರಸ್ ಹಾವಳಿಯನ್ನು ನಿಯಂತ್ರಿಸಲು ರಾಜ್ಯ ಸರ್ಕಾರವು ಹಲವಾರು ಉಪಕ್ರಮಗಳನ್ನು ಜಾರಿಗೊಳಿಸಿದೆ. ಸಂಪೂರ್ಣ ಲಾಕ್‌ಡೌನ್‌ನಿಂದ ಹಿಡಿದು ವಾಹನ ಮತ್ತು ಜನಸಂಚಾರದ ಮೇಲೆ ಮಿತಿಯವರೆಗೆ ಅನೇಕ ಕ್ರಮಗಳು ಜಾರಿಯಲ್ಲಿದ್ದು ಅವು ವಿದ್ಯುತ್ ಸರಬರಾಜು ಕ್ಷೇತ್ರದ ಮೇಲೆ ಅನೇಕ ಬದಲಾವಣೆಗಳನ್ನು ಉಂಟುಮಾಡಿವೆ. ಒಂದು ಕಡೆ ವಾಣಿಜ್ಯ ಮತ್ತು ಕೈಗಾರಿಕೋದ್ಯಮ ಮುಚ್ಚಿರುವುದರಿಂದ ಆ ಕ್ಷೇತ್ರದಲ್ಲಿ ವಿದ್ಯುತ್ ಬೇಡಿಕೆ ಕುಗ್ಗಿದೆ. ಇದರಿಂದ ಬೆಸ್ಕಾಂಗೆ ಬರುತ್ತಿದ್ದ ಆದಾಯ ಇಳಿದಿದೆ. ಇನ್ನೊಂದೆಡೆ ಲಾಕ್‌ಡೌನ್‌ನಿಂದಾಗಿ ಮನೆಯಿಂದಲೇ ಕಾರ್ಯನಿರ್ವಹಿಸುವ ಅವಕಾಶ ಕಲ್ಪಿಸಿರುವುದರಿಂದ ಗೃಹಬಳಕೆಯ ವಿದ್ಯುತ್ ಪ್ರಮಾಣ ಹೆಚ್ಚಿದೆ. ಸಹಜವಾಗಿ ಗ್ರಾಹಕರು ಅಧಿಕ ವಿದ್ಯುತ್ ವೆಚ್ಚ ಭರಿಸಬೇಕಾಗಿದೆ. ಉತ್ಪಾದನಾ ಚಟುವಟಿಕೆಗಳು ಕುಗ್ಗಿರುವ ಹಿನ್ನೆಲೆಯಲ್ಲಿ ಗ್ರಾಹಕರಿಗೆ ಈ ಅಧಿಕ ವಿದ್ಯುತ್ ವೆಚ್ಚ ಭರಿಸುವುದು ದುಸ್ತರವಾಗಿದೆ. ಇವೆಲ್ಲವೂ ಬೆಸ್ಕಾಂ ಆಡಳಿತಕ್ಕೆ ಅನೇಕ ಸವಾಲುಗಳನ್ನು ಒಡ್ಡಿದೆ.

ಬೆಸ್ಕಾಂ ಈ ಸವಾಲುಗಳನ್ನು ಸಮರ್ಥವಾಗಿ ಎದುರಿಸಿ ಗ್ರಾಹಕರ ವಿಶ್ವಾಸವನ್ನು ಉಳಿಸಿಕೊಳ್ಳಲು ಶ್ರಮವಹಿಸಿದೆ. ಇದಕ್ಕಾಗಿ ನಮ್ಮ ಅಧಿಕಾರಿ–ಸಿಬ್ಬಂದಿ ಅಭಿನಂದನಾರ್ಹರು. ಗೃಹಬಳಕೆ ಮತ್ತು ಇತರೆ ಕ್ಷೇತ್ರಗಳ ವಿದ್ಯುತ್ ಗ್ರಾಹಕರ ನೆರವಿಗೆ ಸರ್ಕಾರವು ಅನೇಕ ಪರಿಹಾರ/ಪ್ರೋತ್ಸಾಹಧನಗಳನ್ನು ಪ್ರಕಟಿಸಿದೆ. ವಿದ್ಯುತ್ ಗ್ರಾಹಕರಿಗೆ ತಮ್ಮ ಬಾಕಿಯನ್ನು ಪಾವತಿಸಲು ಹೆಚ್ಚಿನ ಕಾಲಾವಕಾಶ ಒದಗಿಸಿದೆ. ಹೆಚ್ಚುವರಿ ವಾರ್ಷಿಕ ಭದ್ರತಾ ಠೇವಣಿ ಸಂಗ್ರಹವನ್ನು ಮುಂದೂಡಲಾಗಿದೆ. ವಿದ್ಯುತ್ ಶುಲ್ಕ ಬಾಕಿಯನ್ನು ನಿಗದಿತ ಅವಧಿಯಲ್ಲಿ ಪಾವತಿಸದಿದ್ದರೂ 2020 ರ ಜೂನ್ 30 ರವರೆಗೆ ವಿದ್ಯುತ್ ಸಂಪರ್ಕ ಕಡಿತ ಮಾಡದಿರುವ ಭರವಸೆ ನೀಡಲಾಗಿದೆ.

ಇದಲ್ಲದೆ, ರಾಜ್ಯ ಸರ್ಕಾರವು ಇ-ಸಂಚಾರವನ್ನು ಉತ್ತೇಜಿಸುವ ಸಲುವಾಗಿ ಪ್ರಕಟಿಸಿರುವ "ವಿದ್ಯುತ್ ವಾಹನಗಳು ಮತ್ತು ಶೇಖರಣಾ ನೀತಿ–2017" ಕ್ಕೆ ಅನುಗುಣವಾಗಿ ಬೆಸ್ಕಾಂ ಈಗ ಬೆಂಗಳೂರು ನಗರದಾದ್ಯಂತ 12 ಡಿ.ಸಿ ಫಾಸ್ಟ್ ಚಾರ್ಜಿಂಗ್ ಕೇಂದ್ರಗಳು ಮತ್ತು 100 ಎಸಿ ಸ್ಲೋ ಚಾರ್ಜಿಂಗ್ ಪಾಯಿಂಟ್‌ಗಳನ್ನು ಸ್ಥಾಪಿಸಿ ವಿದ್ಯುತ್ ವಾಹನ ಬಳಕೆದಾರರ ಸೇವೆಗೆ ಸಮರ್ಪಿಸಿದೆ. ಪರಿಸರ ಸಂರಕ್ಷಣೆ, ವಾಯು ಮತ್ತು ಶಬ್ದ ಮಾಲಿನ್ಯ ನಿಯಂತ್ರಣ ಕಾರ್ಯದಲ್ಲಿ ಸದೃಢವಾದ ಹೆಜ್ಜೆ ಇಟ್ಟಿದೆ. ಕೋವಿಡ್–19 ರ ಹಾವಳಿಯ ಹಿನ್ನೆಲೆಯಲ್ಲಿಯೂ ಬೆಸ್ಕಾಂ ತನ್ನ ಉದ್ದೇಶಿತ ಕಾರ್ಯಗಳಿಗೆ ಬದ್ಧವಾಗಿರುವುದು ಶ್ಲಾಘನೀಯ ಕಾರ್ಯವಾಗಿದೆ.

**ಶ್ರೀ ಎಂ. ಬಿ. ರಾಜೇಶ್ ಗೌಡ,**
ವ್ಯವಸ್ಥಾಪಕ ನಿರ್ದೇಶಕರು, ಬೆವಿಕಂ

# ಸಂಪಾದಕೀಯ



ಆತ್ಮೀಯರೆ,

ಜುಲೈ ಮತ್ತು ಆಗಸ್ಟ್ ತಿಂಗಳುಗಳೆಂದರೆ ಮಳೆಗೆ ಹೆಸರಾದ ಮಾಸಗಳು.

ಸಾಮಾನ್ಯವಾಗಿ ಜೂನ್ ತಿಂಗಳಿನಲ್ಲಿ ಆರಂಭವಾಗುವ ಮುಂಗಾರು ಮಳೆ ಮುಂದಿನ ಎರಡು ತಿಂಗಳುಗಳಲ್ಲಿ ತೀವ್ರಗೊಳ್ಳುವುದು ವಾಡಿಕೆ.

ಮಳೆಯ ಪ್ರಮಾಣ ಹೆಚ್ಚಾದರೆ ನಗರ ಪ್ರದೇಶಗಳಲ್ಲಿ ಅನಾಹುತಗಳೂ ಸಂಭವಿಸುತ್ತವೆ. ಹಲವು ಜಿಲ್ಲೆಗಳಲ್ಲಿ ಪ್ರವಾಹ ಪರಿಸ್ಥಿತಿ ನಿರ್ಮಾಣವಾಗಿ ಸಾಮಾನ್ಯ ಜನ ಜೀವನವೂ ಅಸ್ತವ್ಯಸ್ತವಾಗುತ್ತದೆ.

ಮಳೆಗಾಲದಲ್ಲಿ ಮರಗಳು ಅಥವಾ ಕೊಂಬೆಗಳು ವಿದ್ಯುತ್ ಸರಬರಾಜು ತಂತಿ ಮತ್ತು ಕಂಬಗಳ ಮೇಲೆ ಬಿದ್ದು ವಿದ್ಯುತ್ ಪೂರೈಕೆಯಲ್ಲಿ ವ್ಯತ್ಯಯವಾಗುವ ಸಂಭವವಿರುತ್ತದೆ.

ಹಾಗಾಗಿ ಮಳೆಗಾಲ ವಿದ್ಯುತ್ ಇಲಾಖೆಗೆ ಒಂದು ರೀತಿಯಲ್ಲಿ ಸವಾಲಿನ ಸಂದರ್ಭ. ಈ ಸವಾಲನ್ನು ಎದುರಿಸಲು 'ಬೆಸ್ಕಾಂ' ಸಿಬ್ಬಂದಿ ಹಾಗೂ ಅಧಿಕಾರಿಗಳಾದ ನಾವು ಸದಾ ಸಿದ್ಧರಿರಬೇಕು.

ಕೆಲಸದ ವೇಳೆ ಏನೇ ಅಡ್ಡಿ–ಆತಂಕಗಳು ಎದುರಾದರೂ ಅವುಗಳನ್ನು ಎದುರಿಸಿ ವಿದ್ಯುತ್ ಗ್ರಾಹಕರ ಹಿತ ಕಾಪಾಡಲೇ ಬೇಕಾಗುತ್ತದೆ.

ಇಂತಹ ಸಂದರ್ಭದಲ್ಲಿ ಸುರಕ್ಷಿತ ಉಪಕರಣಗಳನ್ನು ಬಳಸಲು ಮರೆಯಬಾರದು. ಮಳೆಗಾಲದಲ್ಲಿ ರೈತರು ಬಳಸುವ ನೀರಾವರಿ ಪಂಪ್‌ಸೆಟ್‌ಗಳಿಗೆ ಅಷ್ಟಾಗಿ ವಿದ್ಯುತ್ತಿನ ಅಗತ್ಯ ಇರುವುದಿಲ್ಲ, ಆದರೆ ಇತರೆ ಗ್ರಾಹಕರಿಗೆ ದಿನನಿತ್ಯದ ಬಳಕೆಗಾಗಿ ಸುಗಮ ವಿದ್ಯುತ್ ಒದಗಿಸುವುದಕ್ಕೆ ಆದ್ಯತೆ ನೀಡಲೇ ಬೇಕಿದೆ. ಜಗತ್ತಿನಾದ್ಯಂತ ತ್ವರಿತವಾಗಿ ಹರಡುತ್ತಿರುವ 'ಕೋವಿಡ್ – 19' ಮಹಾಮಾರಿಯ ಬಗ್ಗೆ ಕಳೆದ ಸಂಚಿಕೆಯಲ್ಲಿಯೇ ಪ್ರಸ್ತಾಪಿಸಲಾಗಿದೆ. ಅದು ಮುಂದಿನ ದಿನಗಳಲ್ಲಿ ರಾಜ್ಯದಲ್ಲಿ ಕೂಡ ಎಲ್ಲೆಡೆ ಹೆಚ್ಚಾಗಿ ಹರಡುವ ಸಾಧ್ಯತೆಯನ್ನು ತಜ್ಞರು ವ್ಯಕ್ತಪಡಿಸುತ್ತಿದ್ದಾರೆ.

ಈ ಹಿನ್ನೆಲೆಯಲ್ಲಿ 'ಬೆಸ್ಕಾಂ' ಕಚೇರಿಗಳಲ್ಲಿ ಹಾಗೂ ಹೊರಗಡೆ ಕಾರ್ಯನಿರ್ವಹಿಸುವ ಸಿಬ್ಬಂದಿ – ಅಧಿಕಾರಿಗಳು ಸೂಕ್ತ ಎಚ್ಚರ ವಹಿಸಲೇಬೇಕು.

ಸರ್ಕಾರ ಈಗಾಗಲೇ ನೀಡಿರುವ ಮಾರ್ಗದರ್ಶಿ ಸೂತ್ರಗಳ ಅನುಸಾರ ನಾವೆಲ್ಲರೂ ಕಾರ್ಯನಿರ್ವಹಿಸುವ ಮೂಲಕ ರೋಗವನ್ನು ನಿಯಂತ್ರಿಸಲು ಸಹಕಾರ ನೀಡಲೇಬೇಕು.

ಕೆಲಸದ ಒತ್ತಡದಲ್ಲಿ ಪ್ರತಿಯೊಬ್ಬರೂ ಅವರವರ ಕುಟುಂಬದವರ ರಕ್ಷಣೆಯನ್ನೂ ಮರೆಯಬಾರದು.

"ಬೆಸ್ಕಾಂ ಸ್ನೇಹಿ" ನಿಮ್ಮೆಲ್ಲರ ಗೃಹಪತ್ರಿಕೆ. ಅದಕ್ಕೆ ಕತೆ, ಕವನ, ನಿಮ್ಮ ಪ್ರವಾಸಾನುಭವ ಇತ್ಯಾದಿ ವಿಚಾರಗಳ ಕುರಿತ ಲೇಖನಗಳನ್ನು ಮರೆಯದೆ ಕಳುಹಿಸಿ.

ಸೂಕ್ತ–ಸಲಹೆ, ಸೂಚನೆಗಳಿಗೂ ಸ್ವಾಗತ. ಮುಂದಿನ ದಿನಗಳಲ್ಲಿ ಬರುವ ಶ್ರೀಕೃಷ್ಣ ಜನ್ಮಾಷ್ಟಮಿ, ಗೌರಿ–ಗಣೇಶ ಹಬ್ಬಗಳಿಗೆ ತಮ್ಮೆಲ್ಲರಿಗೂ ಹಾರ್ದಿಕ ಶುಭಾಶಯಗಳು.

ವಂದನೆಗಳೊಂದಿಗೆ.

**ಶ್ರೀ ಬಿ.ಆರ್.ಸೋಮಶೇಖರ್**
ಪ್ರಧಾನ ವ್ಯವಸ್ಥಾಪಕರು (ಗ್ರಾ.ಸಂ) ಬೆಸ್ಕಾಂ.

# ನಮ್ಮ ಊರು, ನಮ್ಮ ಜಿಲ್ಲೆ – ಹಾವೇರಿ

ಅವಿಭಜಿತ ಧಾರವಾಡ ಜಿಲ್ಲೆಯನ್ನು ಮೂರು ಭಾಗಗಳಾಗಿ ವಿಂಗಡಿಸಿದಾಗ ಜನ್ಮ ತಾಳಿದ ಜಿಲ್ಲೆ ಹಾವೇರಿ.

1997ರಲ್ಲಿ ಜೆ.ಎಚ್.ಪಟೇಲರು ಮುಖ್ಯಮಂತ್ರಿಯಾಗಿದ್ದಾಗ ಈ ಹೊಸ ಜಿಲ್ಲೆ ಸ್ಥಾಪನೆಯಾಯಿತು.

ಇದು ಬಯಲುಸೀಮೆ ಮತ್ತು ಅರೆಮಲೆನಾಡು ಪ್ರದೇಶಗಳ ಮಿಶ್ರಣ. ವರದಾ, ಕುಮುದ್ವತಿ, ಧರ್ಮ ಮತ್ತು ತುಂಗ-ಭದ್ರಾ ಇಲ್ಲಿನ ಜೀವನದಿಗಳು. ಬ್ಯಾಡಗಿ ಮೆಣಸು, ಹತ್ತಿ, ಮೆಕ್ಕೆಜೋಳ, ಕಬ್ಬು, ರಾಗಿ, ಭತ್ತ ಮತ್ತು ಹಸಿರುಮೆಣಸು ಇಲ್ಲಿನ ಪ್ರಮುಖ ಬೆಳೆಗಳು.

ಹಾವೇರಿ, ಬ್ಯಾಡಗಿ, ಹಿರೇಕೆರೂರು, ರಾಣೆಬೆನ್ನೂರು, ಹಾನಗಲ್, ಶಿಗ್ಗಾಂವಿ, ಸವಣೂರು ಸೇರಿ ಏಳು ತಾಲ್ಲೂಕುಗಳಿದ್ದ ಈ ಜಿಲ್ಲೆಗೆ ಈಗ ಹೊಸದಾಗಿ ರಟ್ಟಿಹಳ್ಳಿ ತಾಲ್ಲೂಕನ್ನು ಸೇರಿಸಲಾಗಿದೆ.

ಜಿಲ್ಲೆಯಲ್ಲಿ ಅಂದಾಜು 17 ಲಕ್ಷ ಜನಸಂಖ್ಯೆ ಇದೆ. ಹಾವೇರಿಯ ಸುತ್ತಲೂ ಸಣ್ಣ ಗುಡ್ಡಗಳು ಮತ್ತು ದೊಡ್ಡ ಬೆಟ್ಟಗಳು ಇದ್ದು ನಿಸರ್ಗಪ್ರಿಯರಿಗೆ ಮತ್ತು ಚಾರಣಾಸಕ್ತರಿಗೆ ಮುದವನ್ನು ನೀಡುವ ಸ್ಥಳವಾಗಿದೆ.

**ಕಾಗಿನೆಲೆ–ಕನಕದಾಸರ ಕ್ಷೇತ್ರ:**

ಕಾಗಿನೆಲೆ ಬ್ಯಾಡಗಿ ಸಮೀಪದ ಒಂದು ಸಣ್ಣ ಗ್ರಾಮವಾದರೂ ಮಹಾನ್ ಕವಿ, ಸಂತ ಕನಕದಾಸರು ವಾಸಿಸಿದ ಪುಣ್ಯಕ್ಷೇತ್ರವೆಂದು ಪ್ರಸಿದ್ಧಿಯಾಗಿದೆ.



ಪುರಂದರದಾಸರ ಸಮಕಾಲೀನರಾದ ಕನಕದಾಸರು ಹುಟ್ಟಿದ್ದು ಹಾವೇರಿಯಿಂದ 15 ಕಿ,ಮೀ. ದೂರದ ಬಾಡಾ ಎಂಬ ಗ್ರಾಮದಲ್ಲಿ, ಆದರೆ ನೆಲೆ ನಿಂತದ್ದು ಕಾಗಿನೆಲೆಯಲ್ಲಿ. ಹಲವಾರು ಮಹತ್ವಪೂರ್ಣ ಕೀರ್ತನೆಗಳನ್ನು ಹಾಗೂ ಗ್ರಂಥಗಳನ್ನು ರಚಿಸುವ ಮೂಲಕ ಶ್ರೇಷ್ಠ ದಾರ್ಶನಿಕ ಕವಿಯಾದರು.

ಕಾಗಿನೆಲೆಯಲ್ಲಿ ವಿಜಯನಗರದ ಶೈಲಿಯಲ್ಲಿ ನಿರ್ಮಾಣವಾಗಿರುವ ಲಕ್ಷ್ಮೀನರಸಿಂಹ ಮತ್ತು ಕನಕದಾಸರ ಆರಾಧ್ಯ ದೈವ ಆದಿ ಕೇಶವನ ದೇವಾಲಯಗಳಿವೆ.

ಈ ಎರಡೂ ದೇವಾಲಯಗಳು ಸುಮಾರು 500 ವರ್ಷಗಳ ಹಿಂದೆಯೇ ಸ್ಥಾಪಿತವಾಗಿದ್ದು ಒಂದೇ ಪ್ರಾಕಾರದಲ್ಲಿವೆ. ದಾಸರು ಅವರ ಕಾಲದಲ್ಲಿ ಉಪಯೋಗಿಸಿದ್ದ ಶಂಖ ಮತ್ತು ಹರಿವಾಣಗಳು ಇಲ್ಲಿವೆ.

**ಅಬಲೂರು ಸೋಮೇಶ್ವರ ದೇವಾಲಯ :**

ಕನ್ನಡ ಸಾಹಿತ್ಯದಲ್ಲಿ 'ಸರ್ವಜ್ಞ' ಸುಪರಿಚಿತ. ಅವನ ವಚನಗಳು ಮನೆಮಾತಾಗಿವೆ. ಸರ್ವಜ್ಞ ಅಬಲೂರು ಮತ್ತು ಮಾಸೂರಿನವನೆಂದು ಹೇಳಲಾಗಿದೆ.

ಕಲ್ಯಾಣ ಚಾಲುಕ್ಯರ ಶಿಲ್ಪಶೈಲಿಯಲ್ಲಿ ನಿರ್ಮಾಣವಾಗಿರುವ ಸೋಮೇಶ್ವರ ಶಿವಾಲಯವು 12ನೇ ಶತಮಾನದಲ್ಲಿ ನಿರ್ಮಿತವಾಗಿದೆ.



**ಸೋಮೇಶ್ವರ ಸರ್ವಜ್ಞನ ಆರಾಧ್ಯ ದೈವ.**

**ಚೌಡಯ್ಯ ದಾನಪುರ – ಮುಕ್ತೇಶ್ವರ ಶಿವಾಲಯ:**

ಈ ಪುಟ್ಟ ಗ್ರಾಮವು ಹಿಂದಿನಿಂದಲೂ ತ್ರಿಪುರ ದಾನಪುರ ಎಂದೇ ಪ್ರಸಿದ್ಧಿಯಾಗಿತ್ತು. ಈ ಗ್ರಾಮದಲ್ಲಿರುವ ಚೌಡಯ್ಯ ದಾನಪುರ, ಚಂದ್ರಪುರ ಮತ್ತು ನರಸಿಂಹಪುರ ಎಂಬ ಮೂರು ಕುಗ್ರಾಮಗಳು ಸೇರಿ ಚೌಡಯ್ಯ ದಾನಪುರ ಎಂಬ ಹೆಸರಿನಲ್ಲಿ ಪುಣ್ಯಕ್ಷೇತ್ರವೆನಿಸಿತು. ಈ ಹಳ್ಳಿಯಲ್ಲಿ ವಿಶಾಲವಾದ ಸ್ಥಳದಲ್ಲಿ ಮುಕ್ತೇಶ್ವರ ಶಿವಾಲಯವನ್ನು 11ನೇ ಶತಮಾನದಲ್ಲಿ ಭವ್ಯವಾಗಿ ನಿರ್ಮಿಸಲಾಗಿದೆ.

ತುಂಗಭದ್ರಾನದಿಯ ಮಡಿಲಿನಲ್ಲಿರುವ ಈ ದೇವಾಲಯ ಸಂಕುಲದಲ್ಲಿ ವೀರಭದ್ರ, ಗೋಮುನಿ, ರುದ್ರಮುನಿ, ಕಲ್ಲೇಶ್ವರ ಮತ್ತು ಭೈರವ ದೇಗುಲಗಳೂ ಇವೆ. ನದಿಯದಡದಲ್ಲಿ ಶಿವಶರಣ ಅಂಬಿಗರ ಚೌಡಯ್ಯನ ಗದ್ದುಗೆಯೂ ಇದೆ.

**ಶಿಶುನಾಳ :** ಹಾವೇರಿಯಿಂದ 55 ಕಿ.ಮೀ ದೂರದಲ್ಲಿರುವ ಶಿಶುನಾಳ ಗ್ರಾಮ ಸಂತ ಶಿಶುನಾಳ ಷರೀಫರ ಊರು.

ಭಾವೈಕ್ಯದ ಹರಿಕಾರರೆಂದೇ ಪ್ರಸಿದ್ಧಿ ಪಡೆದ ಸಂತಶಿಶುನಾಳರು ಹಜರತ್ ಇಮಾಮ್ ಹಜಮಾ ದಂಪತಿಗಳ ಮಗನಾಗಿ ಹುಟ್ಟಿ ಬ್ರಾಹ್ಮಣ ಗುರು ಗೋವಿಂದ ಭಟ್ಟರಿಂದ ಗುರು ದೀಕ್ಷೆಯನ್ನು ಪಡೆದರು.

ಇಸ್ಲಾಮೀ ಮೊಹರಂ ಪದಗಳ ಜತೆಗೆ ಕನ್ನಡದಲ್ಲಿ ತತ್ವ ಪದಗಳನ್ನು ರಚಿಸಿ ಖ್ಯಾತನಾಮರಾದರು.



ನಿತ್ಯ ಜೀವನದಲ್ಲಿ ಕಂಡು ಬಂದ ಸಂಗತಿಗಳನ್ನು ಹಾಡಿನ ಮೂಲಕ ಹೊರಹಾಕಿದ ಷರೀಫರು ಜಾತಿಭೇದವನ್ನು ಧಿಕ್ಕರಿಸಿ ಭಾವೈಕ್ಯವನ್ನು ಬೋಧಿಸಿದರು. ಅವರ ಸಮಾಧಿ ಹಿಂದೂ ಮತ್ತು ಮುಸ್ಲೀಮರಿಂದ ಪೂಜಿಸಲ್ಪಡುತ್ತದೆ.

**ಗಳಗನಾಥೇಶ್ವರ ಶಿವಾಲಯ :** ವರದಾ ಮತ್ತು ತುಂಗಭದ್ರಾ ನದಿಗಳ ಸಂಗಮ ಸ್ಥಳವಾದ ಗಳಗನಾಥ ಅಗ್ರಹಾರದಲ್ಲಿ ಪ್ರಾಚೀನ ಗಳಗನಾಥ ಶಿವಾಲಯವಿದೆ.

ಶಿಲ್ಪ ಸಿರಿಯ ಪ್ರತೀಕವಾಗಿರುವ ಈ ದೇಗುಲವನ್ನು 11ನೇ ಶತಮಾನದಲ್ಲಿ ಕಲ್ಯಾಣ ಚಾಲುಕ್ಯರ ಶೈಲಿಯಲ್ಲಿ ನಿರ್ಮಿಸಲಾಗಿದೆ.

ಗರ್ಭಗುಡಿಯಲ್ಲಿ 2 ಮೀಟರ್ ಎತ್ತರದ ಶಿವಲಿಂಗವಿದೆ. ಸುಕನಾಸಿಯಲ್ಲಿ ಸರಸ್ವತಿ ಮತ್ತು ಜನಾರ್ಧನ ಸ್ವಾಮಿಯ ವಿಗ್ರಹಗಳಿವೆ.

ಶೈವ ಮತ್ತು ವೈದಿಕ ಧರ್ಮದ ಸಮನ್ವತೆಯ ಪ್ರತೀಕವಾಗಿರುವ ಈ ದೇವಾಲಯದಲ್ಲಿ ಎತ್ತರವಾದ ವಿಷ್ಣು, ಗಣಪತಿ, ಸೂರ್ಯ, ಮಹಿಷ ಮರ್ದಿನಿ ಮತ್ತಿತರ ದೇವತೆಗಳ ಶಿಲಾಮೂರ್ತಿಗಳಿವೆ.

**ಕೃಷ್ಣಮೃಗ ಅಭಯಾರಣ್ಯ**

ಹಾವೇರಿ, ಬ್ಯಾಡಗಿ ಮತ್ತು ರಾಣೆಬೆನ್ನೂರು ಪ್ರದೇಶಗಳಲ್ಲಿ ಸಾಕಷ್ಟು ಕೃಷ್ಣಮೃಗಗಳು ಇರುವುದನ್ನು ಗಮನಿಸಿದ ಸರ್ಕಾರ 1979 ರಲ್ಲಿ ಈ ಅಭಯಾರಣ್ಯವನ್ನು ರೂಪಿಸಿತು.

ಸಾವಿರಾರು ಕೃಷ್ಣಮೃಗಗಳನ್ನು ಇಲ್ಲಿ ನೋಡಬಹುದು. ಪ್ರವಾಸಿಗರ ಅನುಕೂಲಕ್ಕಾಗಿ ಇಲ್ಲಿ ಒಂದು ವಿಶ್ರಾಂತಿ ಗೃಹವನ್ನೂ ಕಟ್ಟಲಾಗಿದೆ. ಅರಣ್ಯ ಇಲಾಖೆ ಪ್ರವಾಸಿಗರಿಗೆ ವಾಹನ ಸೌಕರ್ಯವನ್ನು ಒದಗಿಸುತ್ತದೆ.

**ಬಂಕಾಪುರದ ಕೋಟೆ – ನವಿಲುಧಾಮ :**

ಬಂಕಾಪುರದ ನವಿಲು ಪಕ್ಷಿಧಾಮದಿಂದ ಪ್ರಸಿದ್ಧಿ ಪಡೆದಿದೆ.

ಹಾವೇರಿಯಿಂದ 18 ಕಿ.ಮೀ. ದೂರದ ಹೊರವಲಯದಲ್ಲಿ ವಿಶಾಲವಾದ ಹುಲ್ಲುಗಾವಲಿನಲ್ಲಿ ನಿರ್ಮಿತವಾಗಿರುವ ಈ ನವಿಲುಧಾಮವು ಪಕ್ಷಿ ವೀಕ್ಷಕರಿಗೆ



ಸಂತಸದ ಪ್ರದೇಶವಾಗಿದೆ.

ರಾಜ್ಯ ಸರ್ಕಾರವು ಇದನ್ನು ನವಿಲುಗಳ ಸುರಕ್ಷಿತ ಪ್ರದೇಶವೆಂದು ಘೋಷಿಸಿದೆ.

**ಮಾಸೂರು – ಮದಗ ಕೆರೆ :**

ಸುತ್ತಲೂ ಬೆಟ್ಟಗುಡ್ಡಗಳಿಂದ ಆವೃತವಾಗಿ ನಯನಮನೋಹರ ನಿಸರ್ಗದಿಂದ ಕೂಡಿರುವ ಮಾಸೂರು – ಮದಗ ಕೆರೆ ವಿಶಾಲವಾದ ಸರೋವರದಂತೆ ಕಾಣುತ್ತದೆ.

ಎಲ್ಲೆಡೆ ಇರುವ ದಂತಕತೆಗಳ ಹಾಗೆ ಈ ಕೆರೆಯ ನಿರ್ಮಾಣಕ್ಕೆ ಮಾಸೂರಿನ ಮಲ್ಲನಗೌಡನ ಸೊಸೆ ಕೆಂಚಮ್ಮನ ತ್ಯಾಗವೇ ಕಾರಣವಾಯಿತಂತೆ. ಆದ್ದರಿಂದ ಸ್ಥಳೀಯರು ಇದನ್ನು ಕೆಂಚಮ್ಮನ ಕೆರೆ ಎಂದೂ ಕರೆಯುತ್ತಾರೆ.

ಇಲ್ಲಿನ ಪ್ರಶಾಂತ ವಾತಾವರಣ ಸವಿಯಲು ಅನೇಕ ಪ್ರವಾಸಿಗರು ಇಲ್ಲಿಗೆ ಬರುತ್ತಾರೆ.

ಹಿರೇಕೆರೂರಿನಿಂದ 18 ಕಿ.ಮೀ. ದೂರದಲ್ಲಿರುವ ಈ ಸೊಬಗಿನ ತಾಣವನ್ನು ಉತ್ತಮ ರಸ್ತೆಯ ಮೂಲಕ ಸಂಪರ್ಕಿಸಬಹುದು.

ಹಾನಗಲ್ಲಿನ ತಾರಕೇಶ್ವರ ಸ್ವಾಮಿ ದೇವಾಲಯ, ಶಿಗ್ಗಾಂವಿ ಬಳಿಯ ಗಂಗೀ ಬಾವಿ, ತಿಳವಳ್ಳಿಯ ಶಾಂತೇಶ್ವರ ಶಿವಾಲಯ ಸೇರಿದಂತೆ ಇನ್ನೂ ಕೆಲವು ಪ್ರವಾಸಿತಾಣಗಳು ಈ ಜಿಲ್ಲೆಯಲ್ಲಿವೆ.

## ಆಸ್ಪತ್ರೆಯಿಂದ ಚೇತರಿಸಿಕೊಂಡಿರುವ ಕೊರೋನಾ ಸೋಂಕಿತ ರೋಗಿಗಳು ನೀಡಿದ ಮಾಹಿತಿ

**ನಾವು ಪ್ರತಿದಿನ ಹೀಗೆ ಮಾಡಿದ್ದೇವೆ:**

1. ವಿಟಮಿನ್ ಸಿ–1000 ಮಿ.ಗ್ರಾಂ ತಿನ್ನಿರಿ
2. ವಿಟಮಿನ್ ಇ–3
3. ದಿನಕ್ಕೆ ಒಂದು ಮೊಟ್ಟೆ ತಿನ್ನಿರಿ
4. 8 ಗಂಟೆಗಳ ಕಾಲ ನಿದ್ರೆ ಮಾಡಿ
5. ಪ್ರತಿದಿನ 7 ಲೀಟರ್ ನೀರು ಕುಡಿಯಿರಿ
6. ಯಾವುದೇ ಕಾರಣಕ್ಕೂ ತಣ್ಣೀರು ಕುಡಿಯಬೇಡಿ
7. ಹಳೆಯ ಆಹಾರವನ್ನು ಸೇವಿಸಬೇಡಿ
8. ತಿನ್ನುವ ಮೊದಲು 20 ಸೆಕೆಂಡುಗಳ ಕಾಲ ನಿಮ್ಮ ಕೈಗಳನ್ನು ಸಾಬೂನಿನಿಂದ ತೊಳೆಯಿರಿ
9. ಮೇಲಿಂದ ಮೇಲೆ ಬಿಸಿ ನೀರನ್ನು ಕುಡಿಯಿರಿ
10. ಬಿಸಿ ನೀರಿನಲ್ಲಿ ಉಪ್ಪನ್ನು ಹಾಕಿ ಮುಕ್ಕಳಿಸಿರಿ

**ಆಸ್ಪತ್ರೆಯಲ್ಲಿ ನಾವು ಮಾಡಿದ್ದು ಇದನ್ನೆ**

ಕೊರೋನಾ ವೈರಸ್‌ನ ಪಿಹೆಚ್ 5.5 ರಿಂದ 8.5 ರವರೆಗೆ ಇರುತ್ತದೆ. ಕೊರೋನಾ ವೈರಸ್ ಅನ್ನು ಸೋಲಿಸಲು, ನಾವು ಮಾಡಬೇಕಾಗಿರುವುದು ವೈರಸ್‌ನ ಪಿಹೆಚ್ ಮಟ್ಟಕ್ಕಿಂತ ಹೆಚ್ಚಿನ ಕ್ಷಾರೀಯ ಆಹಾರವನ್ನು ಸೇವಿಸುವುದು.

**ಅವುಗಳಲ್ಲಿ ಕೆಲವು:**

ನಿಂಬೆ–9.9 ಪಿಹೆಚ್
ಆವಕಾಡೊಸ್–15.6 ಪಿಎಚ್
ಬೆಳ್ಳುಳ್ಳಿ–13.2 ಪಿಹೆಚ್
ಟ್ಯಾಂಗರಿನ್–8.5 ಪಿಹೆಚ್
ಅನಾನಸ್–12.7 ಪಿಹೆಚ್
ದಂಡೇಲಿಯನ್–22.7 ಪಿಎಚ್
ಕಿತ್ತಳೆ– 9.2 ಪಿಹೆಚ್

**ನೀವು ಕೊರೋನಾ ವೈರಸ್ ಹೊಂದಿದ್ದೀರಿ ಎಂದು ಹೇಗೆ ತಿಳಿಯುವುದು**

1. ಗಂಟಲು ತುರಿಕೆ
2. ಗಂಟಲು ಒಣಗಲು
3. ನಿರಂತರ ಒಣ ಕೆಮ್ಮು
4. ಚಳಿ, ಜ್ವರ
5. ಉಸಿರಾಟದ ತೊಂದರೆ
6. ವಾಸನೆ ಮತ್ತು ರುಚಿಯ ನಷ್ಟ ಇವುಗಳಲ್ಲಿ ಯಾವುದನ್ನಾದರೂ ನೀವು ಗಮನಿಸಿದರೆ, ತಕ್ಷಣ ಅವುಗಳನ್ನು ಹತ್ತಿರದ ಆರೋಗ್ಯ ಕೇಂದ್ರಕ್ಕೆ ವರದಿ ಮಾಡಿ.

**ಸಾಂದರ್ಭಿಕವಾಗಿ ನಿಂಬೆ ಬೆರೆಸಿದ ಬೆಚ್ಚಗಿನ ನೀರನ್ನು ಕುಡಿಯಿರಿ**
**ಸಾರ್ವಜನಿಕ ಹಿತದೃಷ್ಟಿಯಿಂದ ಮನೆಯಲ್ಲಿರಿ, ಸುರಕ್ಷಿತವಾಗಿರಿ, ಮುನ್ನೆಚ್ಚರಿಕೆ ವಹಿಸಿ ಭಯ ತೊಲಗಿಸಿ.**

# ಮಂಕುತಿಮ್ಮನ ಕಗ್ಗ : ಸಹನೆಯೇ ಮನುಜನಿಗೆ ರಕ್ಷಣಾಕವಚ

*ಗ್ರಹಗತಿಯ ತಿದ್ದುವನೆ ಜೋಯಿಸನು ಜಾತಕದಿ?*
*ವಿಹಿತವಾಗಿಹುದದರ ಗತಿ ಸೃಷ್ಟಿವಿಧಿಯಿಂ*
*ಸಹಿಸಿದಲ್ಲದೆ ಮುಗಿಯದಾವ ದಶೆ ಬಂದೊಡಂ*
*ಸಹನೆ ವಜ್ರದ ಕವಚ-ಮಂಕುತಿಮ್ಮ*



ಜ್ಯೋತಿಷಿಯು ಜಾತಕದಲ್ಲಿ ಗ್ರಹಗತಿಯನ್ನು ತಿದ್ದಿ ಬರೆಯಲು ಸಾಧ್ಯವೇ? ಅದರ ಗತಿ ಸೃಷ್ಟಿವಿಧಿಯಿಂದ ಸಂಯೋಜಿತವಾಗಿದೆ. ಆ ಸ್ಥಿತಿಯನ್ನು ಸಹಿಸಿದುದಲ್ಲದೆ ಅದು ಕೊನೆಯಾಗದು. ಹಾಗಾಗಿ ಸಹನೆಯೇ ವಜ್ರ ಕವಚ' ಎನ್ನುತ್ತದೆ ಈ ಕಗ್ಗ.

ಮನುಷ್ಯನು ಬುದ್ಧಿವಂತ, ಕ್ರಿಯಾಶೀಲನಾಗಿ ದುಡಿಯಬಲ್ಲ. ಹೀಗಿದ್ದರೂ ತನ್ನ ನೆನಪಿನ ಪರಿಧಿಯಿಂದಾಚೆ ಇರುವ ನಿನ್ನೆಯನ್ನಾಗಲಿ, ತನ್ನ ಮತಿಯ ದೃಷ್ಟಿಗೆ ನಿಲುಕದ ನಾಳೆಗಳನ್ನಾಗಲಿ ಅರಿಯಲಾರ. ಆದರೆ ನಿಗೂಢವಾಗಿರುವುದರತ್ತ ಆತ ಸದಾ ಕುತೂಹಲಿ. ಜತೆಗೆ ಭವಿತವ್ಯದ ಕನಸುಗಳು ಈಡೇರುತ್ತವೆಯೋ ಇಲ್ಲವೋ ಎಂಬ ಆತಂಕದಲ್ಲಿರುತ್ತಾನೆ. ಬದುಕಿನ ತಲ್ಲಣಗಳಿಗೆಲ್ಲ ಅಗೋಚರವಾದುದೇನೋ ಕಾರಣವಿರಬಹುದು, ಅದುವೇ ತನ್ನ ಸೋಲಿಗೂ ಕಾರಣವಾಗಬಹುದೆಂದು ಭಯಪಡುತ್ತಾನೆ. ಹೀಗೆ ತನ್ನನ್ನು ಮತ್ತೆ ಮತ್ತೆ ಕಾಡುವ ಕುತೂಹಲ, ಆತಂಕ, ಭಯಗಳಿಂದ ಮುಕ್ತನಾಗಲು ಆತನು ಭವಿಷ್ಯಶಾಸ್ತ್ರದ ಮೊರೆಹೋಗುತ್ತಾನೆ. ಆ ಮೂಲಕ ತನ್ನ ಬಾಳಿನ ಏಳಿಗೆಯ ಕುರಿತಾಗಿ ತಿಳಿಯಲು ಯತ್ನಿಸುತ್ತಾನೆ. ಜಾತಕವನ್ನು ಓದಿಸಿ, ಗ್ರಹಗತಿಯ ಆಧಾರದಲ್ಲಿ ವರ್ತಮಾನದ ಸಂಕಷ್ಟಗಳ ಮತ್ತು ಮುಂದೆ ಸಂಭವಿಸಬಹುದಾದ ದುರಿತಗಳ ಬಗ್ಗೆ ತಿಳಿಯಲು ಯತ್ನಿಸುತ್ತಾನೆ. ಶಾಂತಿ, ಹೋಮ ಮುಂತಾದ ಪರಿಹಾರಗಳನ್ನು ಮಾಡುತ್ತಾನೆ. ಏನೇ ಮಾಡಿದರೂ ವಿಧಿಲಿಖಿತವನ್ನು ತಿದ್ದಲಾಗದು. ಈಗಿನ ಸ್ಥಿತಿಗೆ ಕಾರಣವನ್ನು, ಮುಂದೆ ಆಗಬಹುದಾದುದನ್ನು ಜೋಯಿಸರು ವಿವರಿಸಬಲ್ಲರೇ ಹೊರತು ಘಟಿಸಬಹುದಾದುದನ್ನು ತಡೆಯಲಾರರು.

ಮಾನವಜನ್ಮ ಪಡೆದು ಭೂಮಿಗಿಳಿದ ಆತ್ಮನು ಋಣಶೇಷ, ಪಾಪ-ಪುಣ್ಯಗಳಿಗೆ ಅನುಸಾರ ಬದುಕನ್ನು ಪಡೆಯುತ್ತಾನೆ. ಲೋಕಸಂಪರ್ಕದಲ್ಲಿ ಮಿಳಿತನಾಗಿರುತ್ತ ಕರ್ಮದೋಷಗಳನ್ನು ತೊಡೆದುಕೊಳ್ಳುತ್ತಾನೆ. ಹೀಗೆ ಇಹದ ಬಾಳು ಪೂರ್ವಜನ್ಮಗಳ ಕರ್ಮಶೇಷ, ನಂಟಿನೆಳೆಗಳನ್ನು ಹೊಂದಿಕೊಂಡು, ವಿಧಿಯ ನಿರ್ಣಯದಂತೆ ಚಿತ್ರಿತವಾಗುತ್ತದೆ. ಹಾಗಾಗಿ ಬದುಕಿನಲ್ಲಿ ವ್ಯಕ್ತಿಯ ಕೈಮೀರಿ ಏನು ಸಂಭವಿಸುತ್ತದೋ ಅದನ್ನು ಆತ ಸಹಿಸಲೇಬೇಕು.

ನಿಸರ್ಗದ ನಿಯಮಕ್ಕೆ ಅನುಗುಣವಾಗಿ ಬದಲಾಗುವ ಋತು-ಕಾಲ, ಪ್ರಾಕೃತಿಕ ವಿಕೋಪಗಳನ್ನು ಮನುಷ್ಯ ಸಹಿಸಿಕೊಳ್ಳುತ್ತಾನೆ, ಸದ್ದಿಲ್ಲದೆ ಹೊಂದಿಕೊಳ್ಳುತ್ತಾನೆ. ಆದರೆ ಬದುಕಿನ ಏಳು-ಬೀಳುಗಳನ್ನು ಸಹಿಸಿಕೊಳ್ಳಲಾರ. ಜೀವನದಲ್ಲಿ ಬಡತನ-ಸಿರಿತನ, ಆರೋಗ್ಯ-ಅನಾರೋಗ್ಯ, ನೋವು-ನಲಿವು ಸಮುದ್ರದಲೆಗಳಂತೆ ಬಂದು ಹೋಗುತ್ತಿರುತ್ತವೆ. ಯಾವ ಕಾರಣಕ್ಕೆ ತೊಂದರೆಗೊಳಗಾದೆವು, ಹೇಗೆ ಪಾರಾದೆವು ಎಂದು ತಿಳಿಯದು. ಆ ಪ್ರತಿಕೂಲ ಸ್ಥಿತಿಯು ಕಿಂಚಿತ್ಕಾಲವಿದ್ದು ಸರಿಯುತ್ತದೆ. ಸೋಲಾಗಲಿ, ಗೆಲುವಾಗಲಿ ಜೀವನದಲ್ಲಿ ನಿತ್ಯವಲ್ಲ. ಯಾವಾಗ ವ್ಯಕ್ತಿಯಲ್ಲಿ ಅಹಂಭಾವವಿರುವುದೋ ಆಗ ಅಸಹನೆ ಮೂಡುತ್ತದೆ. ಅಹಂಕಾರಕ್ಕೆ ಘಾಸಿಯಾದಾಗಲೆಲ್ಲ ವ್ಯಕ್ತಿ ಚಡಪಡಿಸುತ್ತಾನೆ. ಯಾರಿಗೆ ನಿತ್ಯಾನಿತ್ಯ ವಿವೇಕವಿರುವುದೋ ಅವರಲ್ಲಿ ಸಂಯಮವು ಸಹಜ. ಅದೇ ಅವರಿಗೆ ವಜ್ರಕವಚದಂತೆ ಕಷ್ಟಗಳಿಂದ ಕಾಪಾಡುತ್ತದೆ.

ನಮ್ಮದಿಯ ಜೀವಿತಕ್ಕೆ ಸಹನೆಯಷ್ಟೇ ಸಾಕೆ? ಪೂಜೆ-ಪ್ರಾರ್ಥನೆ ಇತ್ಯಾದಿಗಳಿಂದ ಪ್ರಯೋಜನವಿಲ್ಲವೇ? ಇದೆ. ದೇವತಾರಾಧನೆಯು ಮನಸ್ಸಿಗೆ ಧೈರ್ಯ ಕೊಡುತ್ತದೆ. ಮನಸ್ಸು ಶಾಂತವಾಗಿದ್ದರೆ ಸಹನೆ ಸಾಧ್ಯ. ಭಗವಂತನ ಕಣ್ಗಾವಲಲ್ಲಿ ನಡೆಯುತ್ತಿದ್ದೇವೆಂಬ ಆಸ್ತಿಕಭಾವ ಇದ್ದರೆ ವ್ಯಕ್ತಿ ಸತ್ಯ-ಧರ್ಮದ ಹಾದಿಯಲ್ಲಿ ಸಾಗುತ್ತಾನೆ. ಶ್ರದ್ಧಾ-ಭಕ್ತಿ, ಸರ್ವಾತ್ಮಭಾವದಿಂದ ಬಾಳುವ ವ್ಯಕ್ತಿಯ ಮನಸ್ಸು ಎಂದೂ ಸೋಲದು. ಸಂಕಟಗಳು ಎದುರಾದರೂ ಅವನ್ನು ಸಮರ್ಥವಾಗಿ ಎದುರಿಸುವ ಆತ್ಮಸ್ಥೈರ್ಯ ಜಾಗ್ರತವಾಗಿರುತ್ತದೆ. ಆಗ ಬಾಳಿನಲ್ಲಿ ಏನೇ ಎದುರಾದರೂ ಎಲ್ಲವನ್ನೂ ಸಮಚಿತ್ತದಿಂದ ಎದುರಿಸುತ್ತಾನೆ.

# ಆರೋಗ್ಯವೇ ಭಾಗ್ಯ – ವೀಳ್ಯದೆಲೆ

ವೀಳ್ಯದೆಲೆಯಲ್ಲಿ ಹಲವು ವಿಧಗಳಿವೆ. ಅಲ್ಪ ವ್ಯತ್ಯಾಸವಿದ್ದರೂ ಸಾಮಾನ್ಯ ಗುಣಧರ್ಮ ಒಂದೇ ಆಗಿರುತ್ತದೆ. ಇದರ ಸುಗಂಧವು ಮನಸ್ಸನ್ನು ಉಲ್ಲಾಸಗೊಳಿಸುತ್ತದೆ.

ವೀಳ್ಯದೆಲೆಯನ್ನು ತಾಂಬೂಲದ ಜತೆಗೆ ಊಟದ ನಂತರ ಸೇವಿಸುತ್ತಾರೆ.

ಬಾಯಿಯ ಲಾಲಾರಸ ಸ್ರವಿಸಿ ಜೀರ್ಣಶಕ್ತಿ ಹೆಚ್ಚುವುದು. ಶೀತ ಥಂಡಿಕಾಲದಲ್ಲಿ ತಾಂಬೂಲವನ್ನು ಮೆಲ್ಲುವುದರಿಂದ ದೇಹದಲ್ಲಿ ಶಾಖದ ಸಂಚಾರವಾಗುವುದು. ಹಾಗೇ ಬಾಯಿಯ ದುರ್ಗಂಧ ನಿವಾರಣೆಯಾಗಿ ಮನಸ್ಸಿಗೆ ಹಿತವಾಗುವುದು.

ತಾಂಬೂಲದ ಗುಣ ಹೃದಯಕ್ಕೆ ಹಿತಕಾರಿ, ಕಫ, ವಾತಗಳನ್ನು ಪರಿಹರಿಸುತ್ತದೆ.

ದಂತಕ್ಷಯ ಹಾಗೂ ವಸಡು ಬಾಧೆಗಳಲ್ಲಿ ವೀಳ್ಯದೆಲೆಗಳನ್ನು ಅಗಿಯುತ್ತಿದ್ದರೆ ಪರಿಹಾರ ದೊರೆಯುತ್ತದೆ. ಚಿಕ್ಕಮಕ್ಕಳಿಗೆ ಹೊಟ್ಟೆನೋವು, ಹೊಟ್ಟೆ ಉಬ್ಬರಿಸುವಿಕೆ ಇದ್ದರೆ, ಕೊಬ್ಬರಿ ಎಣ್ಣೆಯನ್ನು ಎಲೆಗೆ ಸವರಿ, ಹೆಂಚಿನ ಮೇಲೆ ಬಿಸಿಮಾಡಿ ಹೊಟ್ಟೆ ಮೇಲೆ ಹಾಕಿ ತೆಗೆಯುತ್ತಿದ್ದರೆ. ನೋವು ನಿವಾರಣೆಗೆ ಸಹಕಾರಿಯಾಗಲಿದೆ.



ವೀಳ್ಯದೆಲೆಯನ್ನು ಲಿಂಬೆ ರಸದಲ್ಲಿ ಪೇಸ್ಟಿನಂತೆ ನುಣ್ಣಗೆ ಅರೆದು ತಲೆಗೆ ಹಚ್ಚಿ ಸ್ವಲ್ಪ ಸಮಯದ ನಂತರ ಸ್ನಾನ ಮಾಡುವುದರಿಂದ ತಲೆಕೂದಲು ಉದುರುವುದು ಹಾಗೂ ತಲೆಹೊಟ್ಟು ನಿವಾರಣೆಗೆ ಸಹಕಾರಿಯಾಗುತ್ತದೆ.

ವೀಳ್ಯದೆಲೆ ರಸಕ್ಕೆ ಒಂದಿಷ್ಟು ಅರಿಶಿನ ಬೆರೆಸಿ ಲೇಪನ ಮಾಡುವುದರಿಂದ ಕತ್ತಿ ಚಾಕುವಿನಿಂದ ಆಗುವ ಗಾಯಗಳ ನಿವಾರಣೆಗೆ ಅನುಕೂಲವಾಗುತ್ತದೆ.

# ಸಾಧಕರು ಇವರು : ಡಾ. ಎಚ್.ಡಿ. ಚಂದ್ರಪ್ಪಗೌಡ

ವೈದ್ಯಕೀಯ ವೃತ್ತಿ ಹಾಗೂ ವೈದ್ಯ ಸಾಹಿತ್ಯ ಎರಡರಲ್ಲೂ ಸೈ ಎನಿಸಿ ಸಾಧನೆ ಮಾಡಿದವರ ಸಾಲಿನಲ್ಲಿ ಪ್ರಮುಖರಾಗುತ್ತಾರೆ ಡಾ.ಎಚ್.ಡಿ.ಚಂದ್ರಪ್ಪಗೌಡ.

ಮಲೆನಾಡಿನ ಬಹುಮುಖ ಪ್ರತಿಭೆಯ ವೈದ್ಯರಾದ ಅವರು ಶಿವಮೊಗ್ಗ ಜಿಲ್ಲೆ ಹೊಸನಗರ ತಾಲ್ಲೂಕಿನ ಹೊಳೆಗದ್ದೆ ಗ್ರಾಮದವರು.

ಮಧ್ಯಮ ವರ್ಗದ ರೈತ ಕುಟುಂಬಕ್ಕೆ ಸೇರಿದ ದುಗ್ಗಪ್ಪಗೌಡ ಮತ್ತು ಹಾಲಮ್ಮ ದಂಪತಿಯ ಪುತ್ರರಾಗಿ 1929 ರಲ್ಲಿ ಜನಿಸಿದರು. ಅವರ ಬಾಲ್ಯದ ಶಿಕ್ಷಣ ತೀರ್ಥಹಳ್ಳಿ ಮತ್ತು ಶಿವಮೊಗ್ಗದಲ್ಲಿ ನಡೆಯಿತು.

ನಂತರ 1956 ರಲ್ಲಿ ಮೈಸೂರು ಮೆಡಿಕಲ್ ಕಾಲೇಜಿನಲ್ಲಿ ಎಂ.ಬಿ.ಬಿ.ಎಸ್. ಪದವಿ ಪಡೆದು ವೃತ್ತಿಯನ್ನು ಶಿಕಾರಿಪುರ ಸರ್ಕಾರಿ ಆಸ್ಪತ್ರೆಯಲ್ಲಿ ಆರಂಭಿಸಿದರು. ನಂತರ ರಾಜ್ಯದ ಹಲವು ಕಡೆ ಕಾರ್ಯನಿರ್ವಹಿಸುವ ಸಂದರ್ಭದಲ್ಲಿ ಮಂಗಳೂರಿನ ಕಸ್ತೂರಬಾ ಮೆಡಿಕಲ್ ಕಾಲೇಜಿನಲ್ಲಿ 1966 ರಲ್ಲಿ ಎಂ.ಎಸ್. ಪದವಿಯನ್ನು ಪಡೆದರು.

ನಂತರ 1984 ರಲ್ಲಿ ಜಿಲ್ಲಾ ಸರ್ಜನ್ ಆಗಿ ನಿವೃತ್ತರಾದ ಬಳಿಕ ಶಿವಮೊಗ್ಗದಲ್ಲಿಯೇ ಖಾಸಗಿ ವೈದ್ಯವೃತ್ತಿ ನಡೆಸಿದವರು.

ವಿದ್ಯಾರ್ಥಿ ದೆಸೆಯಲ್ಲಿದ್ದಾಗಲೇ ದೇಶಕ್ಕೆ ಸ್ವಾತಂತ್ರ್ಯ ಲಭಿಸಿದ ನಂತರ 'ಮೈಸೂರು ಚಲೊ' ಚಳವಳಿಯಲ್ಲಿ ಭಾಗವಹಿಸಿ ಜೈಲುವಾಸ ಅನುಭವಿಸಿದ್ದರು. ಗ್ರಾಮಾಂತರ ಪ್ರದೇಶಗಳ ಆಸ್ಪತ್ರೆಯಲ್ಲಿ ಅಗತ್ಯವಾದ 'ಬ್ಲಡ್ ಬ್ಯಾಂಕ್' ಸ್ಥಾಪನೆ, ರಕ್ತದಾನಕ್ಕೆ ಪ್ರೋತ್ಸಾಹ, ಮೈಸೂರು ರಾಜ್ಯ ಸ್ನಾತಕೋತ್ತರ ಪದವೀಧರರ ಮೆಡಿಕಲ್ ಅಸೋಸಿಯೇಷನ್ ಸ್ಥಾಪನೆಗೆ ಕಾರಣಕರ್ತರಾದರು.

ನಿವೃತ್ತಿಯ ನಂತರ ಪರಿಸರದ ಮೇಲಿನ ಕಾಳಜಿಯಿಂದಾಗಿ ಶಿವಮೊಗ್ಗದಲ್ಲಿ ಪರಿಸರ ಸಂರಕ್ಷಣಾ ವೇದಿಕೆಯನ್ನು ಸ್ಥಾಪಿಸಿ ಅದರ ಅಧ್ಯಕ್ಷರಾಗಿಯೂ ಸೇವೆ ಸಲ್ಲಿಸಿದರು. ಆಗ ದೇಶಾದ್ಯಂತ ನಡೆದ ಪಶ್ಚಿಮ ಘಟ್ಟ ಉಳಿಸಿ ಆಂದೋಲನ ಹಾಗೂ ಪಾದಯಾತ್ರೆಯಲ್ಲಿ ಭಾಗವಹಿಸಿ ಮುಂಚೂಣಿಯಲ್ಲಿದ್ದರು.


ಡಾ. ಎಚ್.ಡಿ. ಚಂದ್ರಪ್ಪಗೌಡ

1995 ರಲ್ಲಿ ರಾಷ್ಟ್ರಕವಿ ಕುವೆಂಪು ಪ್ರತಿಷ್ಠಾನದ ಕಾರ್ಯದರ್ಶಿಯಾಗಿ ಸ್ಮಾರಕ ನಿರ್ಮಾಣದಲ್ಲಿ ಸಕ್ರಿಯ ಪಾತ್ರವಹಿಸಿದರು. ಚಂದ್ರಪ್ಪಗೌಡ ಅವರು ಬರೆದ ಲೇಖನಗಳ ಸಂಖ್ಯೆ ಸುಮಾರು 200 ಕ್ಕೂ ಹೆಚ್ಚು. ಅವು ವಿವಿಧ ನಿಯತಕಾಲಿಕಗಳಲ್ಲಿ ಪ್ರಕಟವಾಗಿವೆ.

'ಮದ್ಯಪಾನ ಸಮಸ್ಯೆ', ವೈದ್ಯ ವಿಜ್ಞಾನ ಸಾಧಕರು', 'ಜೀರ್ಣಾಂಗ ರೋಗಗಳು', 'ಭಟ್ಟಿ ಜಾರುವುದು', 'ಕ್ಯಾನ್ಸರ್ ಲೋಕ', 'ವೈದ್ಯ ಲೋಕದ ಕೌತುಕಗಳು', ಸೇರಿದಂತೆ 24 ಕೃತಿಗಳನ್ನು ಅವರು ರಚಿಸಿದ್ದಾರೆ. 'ಮಾದಕ ಮದ್ದುಗಳು', ಆಯುರ್ವೇದ ದರ್ಶನ', 'ಮಾನವ ಯಂತ್ರ ಕುಸಿದು ಬೀಳದಂತೆ ತಡೆಯುವುದು ಹೇಗೆ' ಇವು ಅವರ ಅನುವಾದಿತ ಕೃತಿಗಳು. ವೈದ್ಯಕೀಯ ಕ್ಷೇತ್ರದ ಹಲವು ಸಾಧಕರ ಜೀವನ ಚರಿತ್ರೆಗಳನ್ನೂ ಅವರು ಬರೆದಿದ್ದಾರೆ.

ಅವರ ಮೂರು ಕೃತಿಗಳಿಗೆ ಕರ್ನಾಟಕ ಸಾಹಿತ್ಯ ಅಕಾಡೆಮಿಯ ಬಹುಮಾನ ಹಾಗೂ ಇನ್ನೊಂದಕ್ಕೆ ಕುವೆಂಪು ವೈದ್ಯ ಸಾಹಿತ್ಯ ಪುರಸ್ಕಾರಗಳು ಸಂದಿವೆ. ಅವರ ಸಾಧನೆಗೆ ಹಲವು ಪ್ರತಿಷ್ಠಿತ ಪ್ರಶಸ್ತಿ ಪುರಸ್ಕಾರಗಳು ಲಭಿಸಿವೆ.

ಸಾಧಕರ ಸಾಲಿನಲ್ಲಿದ್ದ ಡಾ. ಚಂದ್ರಪ್ಪಗೌಡ ಅವರು ತಮ್ಮ 91ನೇ ವಯಸ್ಸಿನಲ್ಲಿ 2020ರ ಜೂನ್ 11 ರಂದು ನಿಧನರಾದರು.

# ಡಾ. ಎಚ್. ನರಸಿಂಹಯ್ಯ

ಸುಪ್ರಸಿದ್ಧ ಶಿಕ್ಷಣ ತಜ್ಞ, ಖ್ಯಾತ ವಿಚಾರವಾದಿ, ಸ್ವಾತಂತ್ರ್ಯ ಹೋರಾಟಗಾರ ಮತ್ತು ಅಪ್ಪಟ ಗಾಂಧಿವಾದಿಯಾಗಿದ್ದ ಡಾ. ಎಚ್. ನರಸಿಂಹಯ್ಯ ಅವರು ಜನಮನದಲ್ಲಿ ಎಚ್ಚೆನ್ ಎಂದೇ ಹೆಸರಾಗಿದ್ದವರು.

ಅವಿಭಜಿತ ಕೋಲಾರ ಜಿಲ್ಲೆಯ ಗೌರಿಬಿದನೂರು ತಾಲ್ಲೂಕಿನ ಹೊಸೂರು ಗ್ರಾಮದಲ್ಲಿ 1920 ರ ಜೂನ್ 6 ರಂದು ಜನಿಸಿದರು. ಅವರ ತಂದೆ ಹನುಮಂತಪ್ಪ, ವೃತ್ತಿಯಿಂದ ಹಳ್ಳಿ ಮೇಷ್ಟ್ರು, ತಾಯಿ ವೆಂಕಟಮ್ಮ. ನರಸಿಂಹಯ್ಯನವರ ಪ್ರಾಥಮಿಕ ಹಂತದ ಶಿಕ್ಷಣ ಅವರ ಹಳ್ಳಿ ಹೊಸೂರಿನಲ್ಲಿಯೇ ನಡೆಯಿತು.


ಡಾ. ಎಚ್. ನರಸಿಂಹಯ್ಯ

ನಂತರ ಅವರ ಶಿಕ್ಷಕರೊಬ್ಬರ ನೆರವಿನಿಂದ ಬೆಂಗಳೂರಿನ ನ್ಯಾಷನಲ್ ಹೈಸ್ಕೂಲಿನಲ್ಲಿ ಶಿಕ್ಷಣ ಮುಂದುವರಿಸಿದರು. ಸರ್ಕಾರಿ ಕಾಲೇಜಿನಲ್ಲಿ ಇಂಟರ್ ಮೀಡಿಯಟ್ ಮುಗಿಸಿದರು. ಸೆಂಟ್ರಲ್ ಕಾಲೇಜಿನಲ್ಲಿ ಬಿ.ಎಸ್ಸಿ. ಫಿಸಿಕ್ಸ್ ಆನರ್ಸ್‌ಗೆ ಸೇರಿದ ಅವರು 1942 ರ 'ಕ್ವಿಟ್ ಇಂಡಿಯಾ' ಚಳವಳಿಯಲ್ಲಿ ಭಾಗವಹಿಸಿ 4 ತಿಂಗಳ ಜೈಲುವಾಸವನ್ನೂ ಅನುಭವಿಸಬೇಕಾಯಿತು.

ನಂತರ ಓದು ಮುಂದುವರಿಸಿದ ಅವರು ಬಿ.ಎಸ್ಸಿ, ಆನರ್ಸ್ ನಲ್ಲಿ ಪ್ರಥಮ ದರ್ಜೆಯಲ್ಲಿ ತೇರ್ಗಡೆಯಾದರು. ಹಾಗೇ ಎಂ.ಎಸ್ಸಿ, ಫಿಸಿಕ್ಸ್ ನಲ್ಲಿಯೂ ಪ್ರಥಮ ದರ್ಜೆಯಲ್ಲಿಯೇ 'ಪಾಸಾದರು. ಅವರು ಕಲಿತ ನ್ಯಾಷನಲ್ ಹೈಸ್ಕೂಲ್ 1944 ರಲ್ಲಿ ಬೆಳ್ಳಿಹಬ್ಬ ಆಚರಿಸಿತು. ಅದರ ಸ್ಮರಣಾರ್ಥ 1945 ರಲ್ಲಿ ನ್ಯಾಷನಲ್ ಕಾಲೇಜನ್ನು ಪ್ರಾರಂಭಿಸಲಾಯಿತು. ಮರುವರ್ಷ ಭೌತಶಾಸ್ತ್ರದ ಅಧ್ಯಾಪಕರಾಗಿ ಎಚ್ಚೆನ್ ಕೆಲಸಕ್ಕೆ ಸೇರಿದರು. ನಂತರ ಅವರು 1957 ರಲ್ಲಿ ಅಮೆರಿಕಕ್ಕೆ ತೆರಳಿ ಒಹಾಯೊ ಸ್ಟೇಟ್ ವಿಶ್ವವಿದ್ಯಾಲಯದಲ್ಲಿ ಡಾಕ್ಟರೇಟ್ ಮಾಡಿದರು. ಅಮೆರಿಕದಿಂದ ಬಂದ ನಂತರ ನ್ಯಾಷನಲ್ ಕಾಲೇಜಿನಲ್ಲಿ ಅಧ್ಯಾಪಕ ವೃತ್ತಿ ಮುಂದುವರಿಸಿದರಲ್ಲದೆ ಒಂದು ವರ್ಷದ ಬಳಿಕ ಪ್ರಿನ್ಸಿಪಾಲ್ ಪದವಿಗೇರಿದರು. ಎಚ್ಚೆನ್ ಅವರು ಸ್ವಾತಂತ್ರ್ಯ ಚಳವಳಿಯಲ್ಲಿ ಭಾಗವಹಿಸಲು ಮಹಾತ್ಮಾಗಾಂಧಿಯವರ ಪ್ರೇರಣೆಯೇ ಕಾರಣ. ಅವರು 1933 ರಲ್ಲಿ ನಂದಿಬೆಟ್ಟಕ್ಕೆ ಹಾಗೂ ನಂತರ ಬೆಂಗಳೂರಿಗೆ ಬಂದಾಗ ಅವರನ್ನು ಭೇಟಿಮಾಡಿ ಸ್ಫೂರ್ತಿ ಪಡೆದಿದ್ದರು.

ವಿಜ್ಞಾನ ಹಾಗೂ ವೈಜ್ಞಾನಿಕ ಮನೋಭಾವದಲ್ಲಿ ಅಪಾರ ನಂಬಿಕೆಯನ್ನಿಟ್ಟಿದ್ದ ಅವರು ಬೆಂಗಳೂರು ವಿಜ್ಞಾನ ವೇದಿಕೆ ಸ್ಥಾಪಿಸಿದರು. ಮೌಢ್ಯ ಹಾಗೂ ಮೂಢನಂಬಿಕೆಗಳ ವಿರುದ್ಧ ನಿರಂತರ ಹೋರಾಟ ನಡೆಸಿದರು.

1962 ರಲ್ಲಿ ಬೆಂಗಳೂರಿನಲ್ಲಿ ಲಲಿತ ಕಲಾ ಪರಿಷತ್ತನ್ನು ಸ್ಥಾಪಿಸಿ ಅದರ ಅಧ್ಯಕ್ಷರಾಗಿ ಸಂಗೀತ, ನಾಟಕ, ನೃತ್ಯ ಮುಂತಾದ ಲಲಿತ ಕಲೆಗಳಿಗೆ ಪ್ರೋತ್ಸಾಹ ನೀಡಿದರು.

1972 ರಿಂದ 77ರ ವರೆಗೆ ಬೆಂಗಳೂರು ವಿಶ್ವವಿದ್ಯಾಲಯದ ಕುಲಪತಿಗಳಾಗಿ ಹಲವು ಸುಧಾರಣೆಗಳನ್ನು ಜಾರಿಗೆ ತಂದ ಕೀರ್ತಿ ಅವರಿಗೆ ಸಲ್ಲುತ್ತದೆ.

ನಂತರ ವಿಧಾನ ಪರಿಷತ್ತಿನ ಸದಸ್ಯರಾಗಿ ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದರು. ಭಾರತ ಸರ್ಕಾರದ ಪದ್ಮಭೂಷಣ ಪ್ರಶಸ್ತಿ, ಕನ್ನಡ ರಾಜ್ಯೋತ್ಸವ ಪ್ರಶಸ್ತಿ, ಗುಲ್ಬರ್ಗ ವಿ.ವಿ. ಗೌರವ ಡಾಕ್ಟರೇಟ್, ಶಾಂತವೇರಿ ಗೋಪಾಲಗೌಡ ಪ್ರಶಸ್ತಿ ಸೇರಿದಂತೆ ಹಲವು ಪ್ರಶಸ್ತಿ ಪುರಸ್ಕಾರಗಳು ಎಚ್ಚೆನ್ ಅವರಿಗೆ ಸಂದಿವೆ. ಸರಳತೆ, ನೇರ ನಡೆ-ನುಡಿ, ಅಪ್ಪಟ ಗಾಂಧಿವಾದಿಯಾಗಿ ಪ್ರಾಮಾಣಿಕ ಬದುಕು ನಡೆಸಿದ ಅವರು 2005 ರಲ್ಲಿ ನಿಧನರಾದರು.

ಈ ವರ್ಷ ಅವರ ಜನ್ಮ ಶತಮಾನೋತ್ಸವ ವರ್ಷವಾಗಿದೆ. ಅವರಂತಹವರು ಇಂದಿನ ಸಂದರ್ಭದಲ್ಲಿ ವಿರಳವೆಂದೇ ಹೇಳಬಹುದು.

# ದೇವರಿಗೆ ಪ್ರಾರ್ಥನೆ

ಕಾಣದ ಕರೋನಾ ಕಾಡುತಿದೆ ಇಂದು,
ಹರಡುತಿದೆ ಜಗದ ಜನಗಳಿಗಿಂದು,
ಬಾಡುತಿದೆ ಜೀವ ದಿನವೂ ನೊಂದು,
ನರಳುತಿದೆ ಬದುಕು ಬೀದಿಗೆ ಬಂದು,
ಸಿಗುತ್ತಿಲ್ಲ ಔಷಧವೊಂದು,
ಕಾಗದ ಬರೆಯುವೆ ದೇವರಿಗೊಂದು,
ದಯಮಾಡಿ ಕರುಣಿಸು ಬೇಗನೆ ಬಂದು,
ಕಾಯುವೆ ನಿನ್ನ ಬರುವಿಕೆಗಿಂದು.

ಹೊರಟು ಹೋಗುತ್ತಿದೆ ಎರಡು ಸಾವಿರದ ಇಪ್ಪತ್ತು,
ತೋರಿಯೇ ಬಿಟ್ಟಿತು ಅದರ ಕರಾಮತ್ತು,
ತಂದೊದಗಿಸಿದೆ ನಮಗೆ ದೊಡ್ಡ ಆಪತ್ತು,
ಮನೆಯಲ್ಲಿಯೇ ಇರುವಂತೆ ಮಾಡೇ ಬಿಟ್ಟಿತು
ನಾಶವಾಯಿತು ನಮ್ಮ ಆರ್ಥಿಕ ಸಂಪತ್ತು,
ಏನಾದರೂ ಆಗಲಿ ತೋರಿಸಿ ನಿಮ್ಮ ತಾಕತ್ತು,
ಇಲ್ಲವಾದಲ್ಲಿ ನಮ್ಮೆಲ್ಲರ ಜೀವಕ್ಕೂ ಕಾದಿದೆ ಕುತ್ತು,
ಹೊರಟು ಹೋಗುತಿದೆ 2000 ದ ಇಪ್ಪತ್ತು.

# ತಾಯಿ

ಜೀವನದಲ್ಲಿ ನಾನು ಎಲ್ಲೂ ಕಾಣದ ಪ್ರೀತಿಯನ್ನು ನೀಡಿದವಳು,
ಜೀವನವನ್ನು ತನ್ನ ಕುಟುಂಬಕ್ಕೆ ಧಾರೆ ಎರೆದವಳು,
ಬಡತನವಿದ್ದರೂ ಖುಷಿಯಿಂದ ಬದುಕಿ-ಬಾಳಿ ತೋರಿಸಿದವಳು
ತನ್ನ ನೋವನ್ನೆಲ್ಲಾ ಮರೆತು ಖುಷಿಯ ಹಂಚುವವಳು,
ನಮಗೆ ಖಾಯಿಲೆ ಬಂದರೆ ತಾನು ನರಳುವವಳು
ಯಾವತ್ತು ತನ್ನ ದುಃಖವನ್ನು ಇತರರ ಮುಂದೆ ಹೇಳಿಕೊಳ್ಳದವಳು,
ಬಂಧು ಬಾಂಧವರೊಂದಿಗೆ ಪ್ರೀತಿಯಿಂದ ಬೆರೆಯುವವಳು,
ನಾನು ನನ್ನುದು ಎಂಬ ಅಹಂಕಾರವನ್ನು ಎಂದೂ ತೋರದವಳು,
ಜೀವನ ಎಂದರೆ ಏನು ಎಂದು ಪ್ರತಿಯೊಬ್ಬ ಮಗುವಿಗೂ ಅರ್ಥೈಸಿದವಳು,
ಯಾವ ದೇವರಿಗೂ ಕಡಿಮೆ ಇಲ್ಲ ಎಷ್ಟು ಹೊಗಳಿದರು ಸಾಕಾಗುವುದಿಲ್ಲ,
ಕಣ್ಣಿಗೆ ಕಾಣುವ ನಿಜವಾದ ದೇವತೆಯೇ ಅವಳು ತಾಯಿ..!!!!!

ರಚನೆ : ಶ್ರೀ.ಶರಣಪ್ಪ ನಾಗೋಜಿ, ಕಿರಿಯ ಸಹಾಯಕ, ಹೆಬ್ಬಾಳ ವಿಭಾಗ, ಬೆ.ವಿ.ಕಂ, ಯಲಹಂಕ, ಬೆಂಗಳೂರು-64.

## ನೂತನವಾಗಿ ನಿರ್ಮಿಸಿದ ಬೆವಿಕಂ ಮುಳಬಾಗಿಲು ಉಪವಿಭಾಗದ ಕಟ್ಟಡವನ್ನು ದಿನಾಂಕ 11.05.2020 ರಂದು ಉದ್ಘಾಟಿಸಲಾಯಿತು.





# ನೀ ಅರಿಯೇ



**ಶ್ರೀಮತಿ ಹೆಚ್. ಪಿ. ಶೈಲ**
ವ್ಯವಸ್ಥಾಪಕರು,
ನಿಗಮ ಕಛೇರಿ, ಬೆಸ್ಕಾಂ

ಭೂತಾಯಿಯ ಸ್ಪರ್ಶವನ್ನು ಸವಿದು ನೀ ಅರಿಯೇ
ಉದಯಿಸುವ ಸೂರ್ಯನನ್ನು ಸವಿದು ನೀ ಅರಿಯೇ
ತಂಪಾದ ಚಂದ್ರನನ್ನು ಸವಿದು ನೀ ಅರಿಯೇ
ಥಳಥಳ ಹೊಳೆಯುವ ನಕ್ಷತ್ರಗಳನ್ನು ಸವಿದು ನೀ ಅರಿಯೇ
ನೀಲಿಯ ಬಾನನ್ನು ಸವಿದು ನೀ ಅರಿಯೇ
ಹಸಿರಿನ ತಾಣವನ್ನು ಸವಿದು ನೀ ಅರಿಯೇ
ಕಾಮನಬಿಲ್ಲಿನ ಬಣ್ಣಗಳನ್ನು ಸವಿದು ನೀ ಅರಿಯೇ
ಕಂಪಿಸುವ ಮಣ್ಣನ್ನು ಸವಿದು ನೀ ಅರಿಯೇ
ಸ್ಥಿರವಾದ ಬೆಟ್ಟ ಗುಡ್ಡಗಳನ್ನು ಸವಿದು ನೀ ಅರಿಯೇ
ಗಾಳಿಯನ್ನು ಸವಿದು ನೀ ಅರಿಯೇ
ಝುಳು ಝುಳು ಹರಿಯುವ ನೀರನ್ನು ಸವಿದು ನೀ ಅರಿಯೇ
ಹಾರಾಡುವ ಹಕ್ಕಿಗಳನ್ನು ಸವಿದು ನೀ ಅರಿಯೇ
ನವಿಲಿನ ನಾಟ್ಯವನ್ನು ಸವಿದು ನೀ ಅರಿಯೇ
ಕೋಗಿಲೆಯ ಇಂಪಾದ ಗಾನವನ್ನು ಸವಿದು ನೀ ಅರಿಯೇ
ಘಮ ಘಮಿಸುವ ಹೂವಿನ ಪರಿಮಳವನ್ನು ಸವಿದು ನೀ ಅರಿಯೇ
ಕೂಡಿಟ್ಟ ಹೆಜ್ಜೇನನ್ನು ಸವಿದು ನೀ ಅರಿಯೇ
ಎಲ್ಲವನ್ನೂ ದಾಟಿ ನೀ ಅರಿಯೇ, ನೀ ಅರಿಯೇ
ಮೊದಲು ಮಾನವನಾಗಲು ನೀ ಅರಿಯೇ

# ಕರೋನ

ಮಿಂಚಂತೆ ಕಂಡಿತು
ಸಿಡಿಲಿನಂತೆ ಬಡಿಯಿತು.
ಜಗವನ್ನೇ ಬೆಚ್ಚಿಸಿಬಿಟ್ಟಿತು,
ತನ್ನ ಹೊಡೆತಕ್ಕೆ ಕರೋನ.

ಮಿರಿಮಿರಿದು ಸಾಗುತ್ತಿದ್ದ,
ಸಿಡಿಮಿಡಿಯ ಬದುಕಿಗೆ.
ವಿರಾಮವನ್ನೇ ತಂದಿತು
ಮಾನವ ಜಾತಿಗೆ.

ಮೆರೆದು ಹಿಗ್ಗಿದವನಿಗು,
ಕೊರಗಿ ಕುಗ್ಗಿದವನಿಗು,
ಎಲ್ಲರಿಗೊಂದೇ ಬದುಕೆಂಬುದನು
ಅರಿವಂತೆ ಮಾಡಿತು ತನ್ನ ಹೆಮ್ಮಾರಿ ಕುಣಿತದಿ.

ಎಲ್ಲವ ಮೀರಿ,
ಸಾಹಸಗೈವ ಮನುಜನ ಕೆಚ್ಚೆದೆ ಧೈರ್ಯಕೆ,
ಪ್ರಕೃತಿ ಶಕ್ತಿಯ
ಮೀರಲಾಗದೆಂಬುದ ತೋರಿತು ಜಗಕೆ.

ಜ್ಞಾನ ವಿಜ್ಞಾನಗಳ ತೊಳಲಾಟ,
ಅಹೋರಾತ್ರಿ ನಡೆದಿದೆ ಜೀವಕೆ ಸೆಣಸಾಟ.
ಮಡಿದವರಿಗೆ ಒಂಟಿ ಸಂಸ್ಕಾರ....!
ಜೀವಗಳ ಉಳಿಸಲು ಧಣಿದ ವೈದ್ಯ ಕುಲಕೆ ನಮಸ್ಕಾರ.

ದೈವ ನೀಡಿದ ಬಾಳೊಂದು
ಅಮೃತದ ಬಿಂದು ,
ಬೆರೆತು ಬಾಳುವುದ ಅರಿಯಬೇಕಿಂದು
ತೊರೆದು ಅಹಂಕಾರವ.



**ಕವಿತಾ. ಕೆ**
ಸಹಾಯಕ ಕಾರ್ಯ ನಿರ್ವಾಹಕ
ಅಭಿಯಂತರರು
(ಕಛೇರಿ) ಜಯನಗರ ವಿಭಾಗ
ಬೆವಿಕಂ, ಬೆಂಗಳೂರು

### ಹುಟ್ಟುಹಬ್ಬದ ಶುಭಾಶಯಗಳು

**2020ನೇ ವರ್ಷದ ಜುಲೈ, ಆಗಸ್ಟ್ ಹಾಗೂ ಸೆಪ್ಟೆಂಬರ್ ತಿಂಗಳಿನಲ್ಲಿ ಹುಟ್ಟುಹಬ್ಬ ಆಚರಿಸಿಕೊಳ್ಳುತ್ತಿರುವ ಬೆಸ್ಕಾಂನ ಅಧಿಕಾರಿಗಳು / ಸಿಬ್ಬಂದಿಗೆ "ಬೆಸ್ಕಾಂ ಸ್ನೇಹಿ"ಯ ಹುಟ್ಟುಹಬ್ಬದ ಹಾರ್ದಿಕ ಶುಭಾಶಯಗಳು.**

**– ಸಂಪಾದಕೀಯ ಮಂಡಳಿ**



### ಹಾರ್ದಿಕ ಬೀಳ್ಕೊಡುಗೆ

**ಹತ್ತು ಹಲವು ವರ್ಷ ಸೇವೆ ಸಲ್ಲಿಸಿ ಬೆಸ್ಕಾಂನ ಏಳಿಗೆಗೆ ಶ್ರಮಿಸಿ 2020ನೇ ವರ್ಷದ ಜುಲೈ, ಆಗಸ್ಟ್ ಹಾಗೂ ಸೆಪ್ಟೆಂಬರ್ ತಿಂಗಳಿನಲ್ಲಿ ನಿವೃತ್ತಿ ಹೊಂದುತ್ತಿರುವ ಅಧಿಕಾರಿಗಳು / ಸಿಬ್ಬಂದಿಗೆ "ಬೆಸ್ಕಾಂ ಸ್ನೇಹಿ"ಯ ಹಾರ್ದಿಕ ಬೀಳ್ಕೊಡುಗೆ.**

**– ಸಂಪಾದಕೀಯ ಮಂಡಳಿ**

# ಇವರು ನಮ್ಮ ಸಾಹಿತಿಗಳು : ಡಾ. ನಾ. ಮೊಗಸಾಲೆ

ವೈದ್ಯಕೀಯ ಸೇವೆ ಜತೆಗೆ ಸಾಹಿತ್ಯ ಕೃಷಿಯನ್ನು ನಡೆಸಿ ಗ್ರಾಮೀಣ ಭಾಗದಲ್ಲಿ ಜನಪ್ರಿಯರಾದ ಸಾಹಿತಿ ಡಾ. ನಾ. ಮೊಗಸಾಲೆ.

ಕಾರ್ಕಳ ತಾಲ್ಲೂಕಿನ ಪುಟ್ಟ ಗ್ರಾಮ ಕಾಂತಾವರವನ್ನು ರಾಜ್ಯ ಮಟ್ಟದಲ್ಲಿ ಪರಿಚಯಿಸಿದ ಕೀರ್ತಿ ಅವರದು.

ಕಾಸರಗೋಡಿನ ಕೋಳ್ಯೂರಿನಲ್ಲಿ 1944 ರ ಆಗಸ್ಟ್ 27 ರಂದು ಜನಿಸಿದ ಡಾ.ಮೊಗಸಾಲೆ ಅವರು ಉಡುಪಿಯ ಆಯುರ್ವೇದ ಕಾಲೇಜಿನಲ್ಲಿ ವೈದ್ಯಕೀಯ ಶಿಕ್ಷಣ ಪಡೆದು 1975 ರಲ್ಲಿ ಕಾಂತಾವರದಲ್ಲಿ ವೈದ್ಯಕೀಯ ವೃತ್ತಿಯ ಜತೆಗೇ ಸಾಹಿತ್ಯದ ಪಡಸಾಲೆಗೂ ಪ್ರವೇಶ ಮಾಡಿದ ಅವರು ಹಲವು ಮೌಲಿಕ ಕೃತಿಗಳನ್ನು ರಚಿಸಿದ್ದಾರೆ.

ಇವರ ಸಾಹಿತ್ಯದ ಹರವು ವಿಸ್ತಾರವಾಗಿದ್ದು "ವರ್ತಮಾನದ ಮುಖಗಳು", "ಪಲ್ಲವಿ", "ಮೊಗಸಾಲೆಯ ನೆನಪುಗಳು", "ನೆಲದ ನೆರಳು" ಸೇರಿದಂತೆ 11 ಕವನ ಸಂಕಲಗಳನ್ನು ರಚಿಸಿದ್ದಾರೆ.

"ಮಣ್ಣಿನ ಮಕ್ಕಳು", "ಕನಸಿನ ಬಳ್ಳಿ", "ಅನಂತ", "ಪಲ್ಲಟ", "ನೆಲಮುಗಿಲುಗಳ ನಡುವೆ", "ದಿಗಂತ", ಸೇರಿದಂತೆ ಹಲವು ಕಾದಂಬರಿಗಳು ಹಾಗೂ ಸಣ್ಣಕಥಾ ಸಂಕಲನಗಳನ್ನು ಅವರು ಬರೆದಿದ್ದಾರೆ.

ವೈದ್ಯಕೀಯ ಸಂಬಂಧಿತ ಕೃತಿಗಳ ಜತೆಗೆ ಹಲವು ಸಂಪಾದಿತ ಸಂಪುಟಗಳು ಅವರ ಲೇಖನಿಯಿಂದ ಹೊರಬಂದಿವೆ.

ಇವರ ಹಲವಾರು ಕೃತಿಗಳು ಹಿಂದಿ, ತೆಲುಗು, ಮರಾಠಿ, ಮಲೆಯಾಳ ಹಾಗೂ ಆಂಗ್ಲ ಭಾಷೆಗೆ ಅನುವಾದಗೊಂಡಿವೆ.

ವೃತ್ತಿಯಲ್ಲಿ ನಿವೃತ್ತರಾದ ನಂತರವೂ ಕಾಂತಾವರ ಗ್ರಾಮದ ವಾತಾವರಣ ಹಾಗೂ ಜನರ ಪ್ರೀತಿಯಿಂದ ಆಕರ್ಷಿತರಾದ ಡಾ.ಮೊಗಸಾಲೆ ಅವರು ಅಲ್ಲಿಯೇ ನೆಲೆಸಿದರು. ಮೊದಲಿಗೆ ರೈತರನ್ನು ಸಂಘಟಿಸುವ ಕಾರ್ಯದಲ್ಲಿ ತೊಡಗಿಕೊಂಡ ಅವರು ನಂತರ ಕಾಂತಾವರ ಕನ್ನಡ ಸಂಘ, ಅಲ್ಲಮ ಪ್ರಭು ಪೀಠ ಹಾಗೂ ಮೂಡುಬಿದಿರೆಯ ವರ್ಧಮಾನ ಸಾಹಿತ್ಯ ಪ್ರಶಸ್ತಿಗಳ ಸ್ಥಾಪನೆಗೆ ಕಾರಣಕರ್ತರಾದರು.



ಡಾ.ನಾ.ಮೊಗಸಾಲೆ

ಜಿಲ್ಲೆಯ ಕಾವ್ಯ ಪರಂಪರೆಯನ್ನು ಗುರುತಿಸುವ ಗ್ರಂಥಮಾಲೆ ಪ್ರಕಟಣೆ, ನಂತರ ಉಪನ್ಯಾಸ ಮಾಲೆ. ವಿಚಾರ ಗೋಷ್ಠಿ, ಸಾಧಕರಿಗೆ ಸನ್ಮಾನ ಮೊದಲಾದ ಕಾರ್ಯಕ್ರಮಗಳನ್ನು ಈ ಕನ್ನಡ ಸಂಘದ ಮೂಲಕ ಹಮ್ಮಿಕೊಳ್ಳಲಾಯಿತು.

ನಂತರ ನಂದಳಿಕೆಯ ಕವಿ ಮುದ್ದಣನ ಹೆಸರಿನಲ್ಲಿ "ಮುದ್ದಣ ಸ್ಮಾರಕ ಕಾವ್ಯ ಸ್ಪರ್ಧೆ"ಯನ್ನೂ ಪ್ರಾರಂಭಿಸಲಾಯಿತು.

ಡಾ.ಮೊಗಸಾಲೆ ಅವರು ನಾಡು-ನುಡಿಗೆ ಸಲ್ಲಿಸಿದ ಸೇವೆಯನ್ನು ಪರಿಗಣಿಸಿ ಅವರಿಗೆ ಸಂದ ಪ್ರಶಸ್ತಿ, ಪುರಸ್ಕಾರಗಳು ಹಲವು.

ಕರ್ನಾಟಕ ಸಾಹಿತ್ಯ ಅಕಾಡೆಮಿ ಬಹುಮಾನ, ರಾಜ್ಯೋತ್ಸವ ಪ್ರಶಸ್ತಿ, ಕಡೆಂಗೋಡ್ಲು ಕಾವ್ಯ ಪ್ರಶಸ್ತಿ, ನಾಡಿನ ಪ್ರತಿಷ್ಠಿತ ಮಾಸ್ತಿ ಪ್ರಶಸ್ತಿ ಇವುಗಳಲ್ಲಿ ಪ್ರಮುಖವಾದವುಗಳು.

# ಪ್ರೊ. ಅರವಿಂದ ಮಾಲಗತ್ತಿ



ಪ್ರೊ. ಅರವಿಂದ ಮಾಲಗತ್ತಿ

ಕನ್ನಡ ನಾಡಿನಲ್ಲಿ ಕವಿ - ಸಾಹಿತಿಯಾಗಿ ಮಿಂಚಿದ ಪ್ರತಿಭಾವಂತ ಬುದ್ಧಿ ಜೀವಿಗಳಲ್ಲೊಬ್ಬರು ಪ್ರೊ. ಅರವಿಂದ ಮಾಲಗತ್ತಿ.

'ಸಾಮಾಜಿಕ ಬದ್ಧತೆಯುಳ್ಳ ನಿರ್ದಾಕ್ಷಿಣ್ಯ ಪ್ರವೃತ್ತಿಯ ಗಂಭೀರ ಸೃಜನಶೀಲ ವಿದ್ವಾಂಸರೆಂದು' ಹೆಸರಾದವರು ಅವರು.

'ಮಾನವೀಯತೆ, ವೈಚಾರಿಕತೆ, ಸಾಮಾಜಿಕ ಕಳಕಳಿ ಮತ್ತು ಪ್ರಾದೇಶಿಕತಾ ಮೂಲದ ರಾಷ್ಟ್ರೀಯತೆ ಅವರ ಬದುಕಿನ ವಿಶೇಷ ಲಕ್ಷಣಗಳೆಂದು' ಹಲವು ಸಾಹಿತಿಗಳು ಅವರನ್ನು ಗುರುತಿಸಿದ್ದಾರೆ.

ವಿಜಾಪುರ ಜಿಲ್ಲೆಯ ಮುದ್ದೆಬಿಹಾಳದಲ್ಲಿ 1956 ರ ಆಗಸ್ಟ್ 1 ರಂದು ಜನಿಸಿದ ಅವರು ಪ್ರಾಥಮಿಕ ಹಂತದ ಓದನ್ನು ಮುದ್ದೆಬಿಹಾಳದಲ್ಲೇ ಮುಗಿಸಿದರು. ನಂತರ ಕಾಲೇಜು ಶಿಕ್ಷಣವನ್ನು ಅಲ್ಲಿಯೇ ಮುಗಿಸಿ, ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಸ್ನಾತಕೋತ್ತರ ಪದವಿಯನ್ನು ಪ್ರಥಮ ದರ್ಜೆಯಲ್ಲಿ ಪಡೆದರು.

ಮಂಗಳೂರಿನ ಸರ್ಕಾರಿ ಕಾಲೇಜಿನಲ್ಲಿ ಉಪನ್ಯಾಸಕರಾಗಿದ್ದ ಅವರು ನಂತರ 1992 ರಿಂದ 94ರ ವರೆಗೆ ಮಂಗಳೂರು ವಿಶ್ವವಿದ್ಯಾಲಯದ ಕನ್ನಡ ವಿಭಾಗದ ಮುಖ್ಯಸ್ಥರಾಗಿ ಕಾರ್ಯನಿರ್ವಹಿಸಿದರು.

ನಂತರ ಮೈಸೂರಿನ ಮಾನಸಗಂಗೋತ್ರಿಯ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯಲ್ಲಿ ಪ್ರಾಧ್ಯಾಪಕರಾದರು. 1995 ರಿಂದ 2000ದ ವರೆಗೆ ಅಲ್ಲಿಯೇ ವಿಶ್ವವಿದ್ಯಾಲಯದ ಪ್ರಸಾರಾಂಗದ ನಿರ್ದೇಶಕರಾಗಿ ನಂತರ ಕನ್ನಡ ಅಧ್ಯಯನ ಸಂಸ್ಥೆ ನಿರ್ದೇಶಕರಾಗಿಯೂ ಕಾರ್ಯನಿರ್ವಹಿಸಿದರು.

ಅವರ ಪಿ.ಎಚ್.ಡಿ. ಮಹಾಪ್ರಬಂಧ "ಜನಪದ ಆಟಗಳು" ಸಂಶೋಧನಾ ಕೃತಿಗೆ ಕರ್ನಾಟಕ ವಿಶ್ವವಿದ್ಯಾಲಯದ ಬಂಗಾರದ ಪದಕ ದೊರೆತಿದೆ.

ಅವರ ಪ್ರಕಟಿತ ಕೆಲವು ಸಾಹಿತ್ಯ ಕೃತಿಗಳು: ಮೂಕನಿಗೆ ಬಾಯಿ ಬಂದಾಗ, ಕಪ್ಪುಕಾವ್ಯ, ಮೂರನೆಯ ಕಣ್ಣು, ನಾದ ನಿನಾದ, ವಿಶ್ವತೋಮುಖ (ಕಾವ್ಯ), ಕನ್ನಡ ಸಾಹಿತ್ಯ ಮತ್ತು ದಲಿತಯುಗ, ಸಾಂಸ್ಕೃತಿಕ ದಂಗೆ, ಬೆಂಕಿ ಬೆಳದಿಂಗಳು, ಭೀಮ ನಡೆಯ ಬೆಳಕು (ವಿಚಾರ ಮತ್ತು ವಿಮರ್ಶಾ ಗ್ರಂಥಗಳು). ಕಾರ್ಯ (ಕಾದಂಬರಿ), ಮುಗಿಯದ ಕತೆಗಳು (ಸಣ್ಣಕತೆ), ಮಸ್ತಕಾಭಿಷೇಕ, ಸಮುದ್ರದೊಳಗಣ ಉಪ್ಪು (ನಾಟಕ), ಗೌರ್ಮೆಂಟ್ ಬ್ರಾಹ್ಮಣ (ಆತ್ಮಕತೆ), ಜಾನಪದ ವ್ಯಾಸಂಗ, ತುಳುವರ ಆಟಿಕಳೆಂಜ, ತಾಳಿಕೋಟೆ ದ್ಯಾಮವ್ವ (ಜಾನಪದ). ಹಲವು ಸಂಶೋಧನಾ ಕೃತಿಗಳನ್ನೂ ರಚಿಸಿರುವ ಅವರಿಗೆ ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಜೀಶಂಪ ಜಾನಪದ ಪ್ರಶಸ್ತಿ, ಸಮಾಜ ಕಲ್ಯಾಣ ಇಲಾಖೆಯ ಡಾ.ಅಂಬೇಡ್ಕರ್ ಪ್ರಶಸ್ತಿ, ಡಾ.ಎಚ್.ನರಸಿಂಹಯ್ಯ ಪ್ರಶಸ್ತಿ, ಸೇರಿದಂತೆ ಹಲವು ಪುರಸ್ಕಾರಗಳು ಲಭಿಸಿವೆ.

ವಿಶ್ವವಿದ್ಯಾಲಯದ ಮೂರು ಪ್ರಮುಖ ಅಂಗಗಳಾದ ಬೋಧನಾಂಗ, ಸಂಶೋಧನಾಂಗ ಮತ್ತು ಪ್ರಸಾರಾಂಗ, ಹೀಗೆ ಮೂರು ವಿಭಾಗಗಳಲ್ಲೂ ಕಾರ್ಯ ನಿರ್ವಹಿಸಿದ ಕೀರ್ತಿ ಪ್ರೊ. ಅರವಿಂದ ಮಾಲಗತ್ತಿ ಅವರದು.

ಅವರ ಸಾಹಿತ್ಯಯಾತ್ರೆಯ ಕಾಲದಲ್ಲಿ ಹಲವು ಮೌಲಿಕ ಕೃತಿಗಳ ಸಂಪಾದಕರಾಗಿ ಅವನ್ನು ಹೊರತಂದ ಹೆಗ್ಗಳಿಕೆಯೂ ಅವರದೇ.

ಬೆವಿಕಂ ನಿಗಮ ಕಛೇರಿಯ ಆವರಣದಲ್ಲಿ, ಕೋವಿಡ್–19 ವೈರಸ್ ಸಾಂಕ್ರಾಮಿಕವನ್ನು ತಡೆಗಟ್ಟಲು ಮುಂಜಾಗ್ರತಾ ಕ್ರಮವಾಗಿ ಅಧಿಕಾರಿ–ಸಿಬ್ಬಂದಿ ತಪಾಸಣೆಗಾಗಿ, ತಾಪಮಾನ ಪರೀಕ್ಷಿಸಿ ನಿರ್ಮಲೀಕರಣಗೊಳಿಸುವ ಕಿಯೋಸ್ಕ್‌ಗಳನ್ನು ಅಳವಡಿಸಲಾಗಿದೆ.




















## ಸಂಪಾದಕ ಮಂಡಳಿ

| | |
|---|---|
| **ಶ್ರೀ ಎಂ. ಬಿ. ರಾಜೇಶ್ ಗೌಡ,** ವ್ಯವಸ್ಥಾಪಕ ನಿರ್ದೇಶಕರು | ಅಧ್ಯಕ್ಷರು |
| **ಶ್ರೀ ಡಾ. ಆರ್. ಸಿ. ಚೇತನ್,** ನಿರ್ದೇಶಕರು (ಹಣಕಾಸು) | ಮುಖ್ಯ ಸಂಪಾದಕರು |
| **ಶ್ರೀ ಜಿ. ಅಶೋಕ್ ಕುಮಾರ್,** ನಿರ್ದೇಶಕರು (ತಾಂತ್ರಿಕ) | ಮುಖ್ಯ ಸಂಪಾದಕರು |
| **ಶ್ರೀ ಸೋಮಶೇಖರ್ ಬಿ.ಆರ್,** ಪ್ರಧಾನ ವ್ಯವಸ್ಥಾಪಕರು (ಗ್ರಾ.ಸಂ) | ಸಂಪಾದಕರು |
| **ಶ್ರೀ ಕೆ. ತಿಪ್ಪೇಸ್ವಾಮಿ,** ಪ್ರಧಾನ ಕಾರ್ಯದರ್ಶಿ, ಕವಿಮಂ ಇಂಜಿನಿಯರುಗಳ ಸಂಘ | ಸದಸ್ಯರು |
| **ಶ್ರೀ ಕೆ. ಬಲರಾಮ್,** ಪ್ರಧಾನ ಕಾರ್ಯದರ್ಶಿ, ಕವಿಪ್ರನಿನಿ ನೌಕರರ ಸಂಘ | ಸದಸ್ಯರು |
| **ಶ್ರೀ ರಾಮಚಂದ್ರ ರೆಡ್ಡಿ,** ಪ್ರಧಾನ ಕಾರ್ಯದರ್ಶಿ, ಕವಿಪ್ರನಿನಿ ಲೆಕ್ಕಾಧಿಕಾರಿಗಳ ಸಂಘ | ಸದಸ್ಯರು |
| **ಪ್ರಧಾನ ಕಾರ್ಯದರ್ಶಿ,** ಕವಿಪ್ರನಿನಿ ಪ.ಜಾತಿ ಮತ್ತು ಪ.ಪಂಗಡ ಕ್ಷೇಮಾಭಿವೃದ್ಧಿ ಸಂಘ | ಸದಸ್ಯರು |
| **ಶ್ರೀ ಎಂ. ರವೀಂದ್ರ,** ಕವಿಪ್ರನಿನಿ/ಎಸ್ಕಾಂಗಳ ಪ.ಜಾತಿ ಮತ್ತು ವರ್ಗದವರ ಅಧಿಕಾರಿಗಳ ಸಂಘ | ಸದಸ್ಯರು |
| **ಶ್ರೀ ಕುಮಾರ್ ಮುದ್ದಣ್ಣನವರ್,** ಪ್ರಧಾನ ಕಾರ್ಯದರ್ಶಿ, ಕವಿಪ್ರನಿನಿ ಡಿಪ್ಲೋಮಾ ಇ. ಸಂಘ | ಸದಸ್ಯರು |


## ಮನವಿ

**ಬೆಸ್ಕಾಂ ಸ್ನೇಹಿ** ಗೃಹಪತ್ರಿಕೆಯಲ್ಲಿ ಪ್ರಕಟಣೆಗಾಗಿ ನಿಮ್ಮ ಅಭಿಪ್ರಾಯ, ಸಲಹೆ, ಲೇಖನ, ಕಛೇರಿಯಲ್ಲಿ ಏರ್ಪಡಿಸಿದ ಕಾರ್ಯಕ್ರಮ, ಸಮಾರಂಭಗಳ ಬಗ್ಗೆ ವರದಿಗಳು, ಅಧಿಕಾರಿ/ಸಿಬ್ಬಂದಿ ವರ್ಗದವರ ಸಾಧನೆಗಳ ಬಗ್ಗೆ ಮಾಹಿತಿಗಳನ್ನು ಕಳುಹಿಸಬೇಕಾದ

ವಿಳಾಸ : **ಪ್ರಧಾನ ವ್ಯವಸ್ಥಾಪಕರು (ಗ್ರಾ.ಸಂ.), ನಿಗಮ ಕಾರ್ಯಾಲಯ, ಬೆ.ವಿ.ಕಂಪನಿ, ಕೆ.ಆರ್. ವೃತ್ತ, ಬೆಂಗಳೂರು-560 001.**

ಇಮೇಲ್ ವಿಳಾಸ: gmcr@bescom.co.in

**ವಿದ್ಯುತ್ ಸಂಬಂಧಿತ ಯಾವುದೇ ಸಹಾಯಕ್ಕಾಗಿ 24 ಗಂಟೆಗಳ ಸಹಾಯವಾಣಿ:** 1912

**ಸಂದೇಶ ಕಳುಹಿಸಿ:** 58888 **ವೆಬ್‌ಸೈಟ್:**

Printed at : Poornima Printers, Ph. 080 - 23359588